


# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 07 Issue : 66 Friday 15-11-2024 E-mail : maruti.b.hosamani76@gmail.com Page: 4 Price : Rs. 1/-


## “ಸ್ವಾತಂತ್ರ್ಯ ಭಾರತ ನಿರ್ಮಾತೃ ಚಾಚಾ ಪಂಡಿತ ಜವಾಹರಲಾಲ್ ನೆಹರು”




ಭಾರತ ಸ್ವಾತಂತ್ರ್ಯ
ಸೇನಾನಿ
ವಿಶ್ವಕಂಡ
ಭಾರತ ರತ್ನ ಪಂಡಿತ
ಚಾಚಾ ನೆಹರು
ಜನಸಿದ ಅಮೃತ ಘಳಿಗೆ
"ಮಕ್ಕಳ ದಿನಾಚರಣೆ"
ಭಾರತೀಯರ
ಹೆಮ್ಮೆಪಂಡಿತ
ಜವಾಹರಲಾಲ್ ನೆಹರು
ತಂದೆ ಮೋತಿಲಾಲ್
ನೆಹರು ತಾಯಿ ಸ್ವರೂಪರಾಣಿ ಪುಣ್ಯಗರ್ಭದಿ 14 ನವ್ಹಂಬರ್
1889ರಂದು ಜನಸಿದ ಅಮೃತ ಘಳಿಗೆ
ಮಕ್ಕಳ ದಿನಾಚರಣೆ ಮಕ್ಕಳ ಹರುಷದ ಹಬ್ಬ
ಗುಲಾಬಿ ನೆಹರು ಸ್ವಾತಂತ್ರ್ಯ ಭಾರತ ಪ್ರಥಮ ಪ್ರಧಾನಿ ಪಂಡಿತ
ಜವಹರಲಾಲ್ ನೆಹರು
ಆಧುನಿಕ ಭಾರತ ನಿರ್ಮಾತೃ ನವಯುಗದ ನೇತಾರ
"ಅಲಿಪ್ತ ಚಳುವಳಿ"ರೂವಾರಿ ಭಾರತ ದೇಶದ ಪಂಚವಾರ್ಷಿಕ
ಯೋಜನೆ ಪಿತಾಮಹ "ಅರಾಮ್ ಹರಾಮ್ ಹೈ"ದೇಶದ
ಅಭಿವೃದ್ಧಿಗೆ ಕರೆ ಕೊಟ್ಟ ದೂರದೃಷ್ಠಿ ವಿಶ್ವನಾಯಕ ಭಾರತ ದೇಶದ
ಪ್ರಜೆಗಳ ಮನದಲಿ ನಿತ್ಯ ಚಿರ ನೆನಪು ಭಾರತ ಪುಣ್ಯ ಭೂಮಿಯ
ಶಾಂತಿವನದಲಿ ಚಿರ ಸ್ಮರಣೆ
ಭಾರತಾಂಭೆಯ ಹೆಮ್ಮಯ ಆಧುನಿಕ ಭಾರತ ನಿರ್ಮಾತೃ
ಪಂಡಿತ ಚಾಚಾ ನೆಹರುಜಿ ಜನಸಿದ ಅಮೃತ ಘಳಿಗೆ ಶತಕೋಟಿ
ಭಾರತೀಯರ ಮಕ್ಕಳ ದಿನಾಚರಣೆ ಶುಭತರಲಿ ಸರ್ವರಲಿ

–ಶ್ರೀದೇಶಂಸು
ಶ್ರೀ ಸುರೇಶ ಶಂಕ್ರೆಪ್ಪ ಅಂಗಡಿ
ಆರೋಗ್ಯ ನಿರೀಕ್ಷಣಾಧಿಕಾರಿ
ಬಾಗಲಕೋಟ.

## ಅಭಿಮಾನಿಗಳಿಂದ ಬಿ.ವಿ ನಾಯಕರ 58ನೇ ಹುಟ್ಟು ಹಬ್ಬ ಆಚರಣೆ



**ಸಿಹಿ ಕಹಿ ಸುದ್ದಿ**

**ಮಾನ್ವಿ :** ಮಾಜಿ ಸಂಸದ ಬಿ.ವಿ ನಾಯಕರ 58 ನೇ. ಹುಟ್ಟು ಹಬ್ಬವನ್ನು ಅಭಿಮಾನಿಗಳು ಹಾಗೂ ಕಾರ್ಯಕರ್ತರು ಅಂಧರಿಗೆ, ವೃದ್ಧಾಶ್ರಮ ಹಾಗೂ ಆಸ್ಪತ್ರೆ ರೋಗಿಗಳಿಗೆ ಹಣ್ಣು ಹಂಪಲು ವಿತರಿಸುವ ಮೂಲಕ ಆಚರಿಸಿದರು.

ಸರಳ ಸಜ್ಜನಿಕೆಯ ವ್ಯಕ್ತಿ ಹಾಗೂ ಅಭಿಮಾನಿಗಳ ಹೃದಯಕ್ಕೆ ಮಿಡಿಯುವ ವ್ಯಕ್ತಿ ಬಿ.ವಿ ನಾಯಕ ಅವರು ಎಂದು ಕಾರ್ಯಕರ್ತರು ಶುಭ ಹಾರೈಸಿದರು.

ಬಿ.ವಿ ನಾಯಕ ಅವರ 58 ನೇ. ಹುಟ್ಟು ಹಬ್ಬದ ನಿಮಿತ್ತ ಕಾರ್ಯಕರ್ತರು ಹಾಗು ಅಭಿಮಾನಿಗಳು ಸೇರಿಕೊಂಡು ಹಣ್ಣು ಹಂಪಲು ವಿತರಿಸಿದರು. ಬಿ.ವಿ ನಾಯಕರಿಗೆ ಆಯುಷ್ಯ ಮತ್ತು ಆರೋಗ್ಯ ದೇವರು ಕೊಡಲಿ ಎಂದು ಪ್ರಾರ್ಥಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂಎಸ್.ಕೆ ನ್ಯೂಸ್ ಕನ್ನಡ ಚಾನೆಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## "ವಿಶ್ವ ಮಧುಮೇಹ ದಿನಾಚರಣೆ" ಅಂಗವಾಗಿ ಜನ ಜಾಗೃತಿ ಜಾಥಾ ಹಾಗೂ ಅರಿವು ಮೂಡಿಸುವ ಕಾರ್ಯಕ್ರಮ




**ಸಿಹಿ ಕಹಿ ಸುದ್ದಿ**

**ಕಲಕೇರಿ :** ತಾಳಿಕೋಟಿ ತಾಲೂಕಿನ ಕಲಕೇರಿ ಗ್ರಾಮದ ಸಮುದಾಯ ಆರೋಗ್ಯ ಕೇಂದ್ರ ಕಲಕೇರಿಯಲ್ಲಿ "ವಿಶ್ವ ಮಧುಮೇಹ ದಿನಾಚರಣೆ" ಅಂಗವಾಗಿ ಜನ ಜಾಗೃತಿ ಜಾಥಾ ಹಾಗೂ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿ ಕೊಳ್ಳಲಾಯಿತು. ಈ ಕಾರ್ಯಕ್ರಮವನ್ನು ವೈದ್ಯಾಧಿಕಾರಿಗಳಾದ ಡಾ, ನವೀನ್ ಶಂಕರ್ ಸರ್ ಜಾಥಾಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಸಿಬ್ಬಂದಿಗಳಾದ ಶಿವಕುಮಾರ ಶಾಂತಗಿರಿ, ಸಂಗೀತಾ ಪಾಸೋಡಿ, ವಿಜಯಲಕ್ಷ್ಮಿ ಬಬಲೇಶ್ವರ್, ಸಂತೋಷ ಟೆಂಗಳಿ, ಅಪ್ಪಸಬಾ ಮಾಂಗ, ಮಲ್ಲಪ್ಪ ಛಲವಾದಿ, ಶಿವಾನಂದ ಜೇವುರ್, ಎಮ್.ಡಿ ಪಟೇಲ್, ಆಸೀಫ್ ನದಾಫ್, ಸಿದ್ದು ಬ್ಯಾಳ್ಯಾಳ, ರೇಣುಕಾ ಬಡಿಗೇರ, ವಿಶ್ವ, ಸಿದ್ದು ಬುಳ್ಳಾ, ಎಮ್. ಡಿ. ಬೇಕಿನಾಳ ಹಾಗೂ ಊರಿನ ಗ್ರಾಮಸ್ಥರು ಶಾಂತಯ್ಯ ಹಿರೇಮಠ್, ಹಾಗೂ ಆಶಾ ಕಾರ್ಯಕರ್ತರು, ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮೈಬೂಬಬಾಷ.ಮನಗೂಳಿ.ತಾಳಿಕೋಟೆ**

## ನಿಮಗೆ ಹೇಳೋರು ಕೇಳೋರು ಯಾರು ಇಲ್ವಾ ಸಮಯ 10 ಗಂಟೆ ಆದರೂ ಶಾಲೆಯ ಬಾಗಿಲು ತೆಗೆದಿಲ್ಲಾ, ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕನ ವಿರುದ್ಧ – ಮಲ್ಲಿಕಾರ್ಜುನ್ ಅವರಾದಿ ಆಕ್ರೋಶ




**ಸಿಹಿ ಕಹಿ ಸುದ್ದಿ**

**ಇಜೇರಿ :** ಇಜೇರಿಯಲ್ಲಿ ನಡೆದ ಘಟನೆ ಸರ್ಕಾರಿ ಶಾಲೆಯಲ್ಲಿ ಸಮಯ 10 ಗಂಟೆಯಾದರೂ ಶಾಲೆಯ ಬಾಗಿಲು ತೆರೆದೆ ಇಲ್ಲಾ ವಿದ್ಯಾರ್ಥಿಗಳು ಶಾಲೆಯ ಮುಂದೆ ಕುಳಿತು ಕೊಳ್ಳಬೇಕು ನೀವು ಯಾವಾಗ ಬರುತ್ತೀರೋ ಏನೋ ನೀವುಗಳು ಬಂದಾಗ ಮಕ್ಕಳು ಶಾಲೆ ಒಳಗೆ ಬರಬೇಕು ಮಕ್ಕಳಿಗೆ ಶಾಲೆಯಲ್ಲಿ ಸರಿಯಾದ ಆಸನ ವ್ಯವಸ್ಥೆ ಇಲ್ಲ . ನಮ್ಮ ದೇಶ ನಮ್ಮ ಕನ್ನಡ ನಾಡು ಮತ್ತು ನಮ್ಮ ಮಕ್ಕಳು ಅಥವಾ ವಿದ್ಯಾರ್ಥಿಗಳು ಉದ್ಧಾರ ಆಗ್ಬೇಕು ಅಂದ್ರೆ ಹೇಗಾಗಬೇಕು ರ್ರೀ ಸರ್ ಎಂದು ಕರ್ನಾಟಕ ರಕ್ಷಣಾ ವೇದಿಕೆಯ ಇಜೇರಿ ಘಟಕದ ಅಧ್ಯಕ್ಷ ಮಲ್ಲಿಕಾರ್ಜುನ ಅವರಾದಿ ಯವರು ಮುಖ್ಯ ಶಿಕ್ಷಕರನ್ನು ಪ್ರಶ್ನೆ ಮಾಡಿದ್ದಕ್ಕೆ ಶಿಕ್ಷಕರು ನೀವು ಏನ್ ಮಾಡ್ಕೋತೀರಾ ಮಾಡ್ಕೊಳ್ಳಿ. ನಾನು ಬರುವುದೇ ಇದೇ ಸಮಯಕ್ಕೆ ಎಂದು ಹೇಳಿದ್ದಾರೆ. ಅದಕ್ಕೆ ಟಕ್ಕರ್ ಕೊಟ್ಟ ಅಧ್ಯಕ್ಷ ನಿಮಗೆ ಹೇಳೋರು ಕೇಳೋರು ಯಾರು ಇಲ್ವಾ ಎಂದು ಪ್ರಶ್ನಿಸಿದಕ್ಕೆ ಶಿಕ್ಷಕರುಗಳು ಮೌನಕ್ಕೆ ಜಾರಿದ್ದಾರೆ. ಈ ಸಂದರ್ಭದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಇಜೇರಿ ಹೋಬಳಿಯ ವಲಯದ ಅಧ್ಯಕ್ಷ ಹಣಮಂತ ನಾಯಕ , ಉಪಾಧ್ಯಕ್ಷ ಅಮಿದ, ಮತ್ತು ಮುಂತಾದ ಕಾರ್ಯಕರ್ತರು ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂಎಸ್.ಕೆ ನ್ಯೂಸ್ ಕನ್ನಡ ಚಾನಲ್:ಭೀಮಶಂಕರ್ ಎನ್.ನೀಲಕೋಡ.ಇಜೇರಿ. ಜೇವರ್ಗಿ**

## ಅತೀ ಆಸೆ ಜೀವಕ್ಕೆ ಅಪಾಯಕಾರಿ



**ಹಳ್ಳೂರ :** ಅತೀ ಆಸೆ ಜೀವಕ್ಕೆ ಅಪಾಯಕಾರಿ ಹೆಣ್ಣು ಹೊನ್ನು ಮಣ್ಣು ಆಸೆಗೆ ಬಿದ್ದು ಕೋಟ್ಯಾನ್ ಕೋಟಿ ಜನ ಸಾವನ್ನಪ್ಪಿದ್ದಾರೆ. ಆಸೆ ಆಮಿಷಕ್ಕೆ ಒಳಗಾಗಿ ಹೀನ ಕೃತ್ಯ ಮಾಡಿ ಪಾಪಕ್ಕೆ ಗುರಿಯಾಗಬಾರದು . ಮೃತ್ಯ ಯಾರನ್ನು ಬಿಡೋದಿಲ್ಲ ಶಿವನ ಬಕ್ತ ರಾವನ ಹೆಣ್ಣಿನ ಆಸೆಗೆ ಬಿದ್ದು ಕೆಟ್ಟ. ದೇವರಲ್ಲಿ ಅಪಾರವಾದ ನಂಬಿಕೆ ಇಟ್ಟು ನಾಮಸ್ಮರಣೆ ಮಾಡುತ್ತಾ ಇದ್ದರೆ ಕರ್ಮ ನಾಶವಾಗಿ ಪುಣ್ಯ ಪ್ರಾಪ್ತಿಯಾಗುವುದು. ದುಶ್ಚಟಗಳಿಗೆ ಬಲಿಯಾಗಿ ಜೀವನಹಳ್ಳಿ ಹಾಳು ಮಾಡಿಕೊಳ್ಳಬೇಡಿರೆಂದು ಅಡವಿಸಿದ್ಧರಾಮ ಮಹಾಸ್ವಾಮಿಗಳು ಹೇಳಿದರು.

ಅವರು ಗ್ರಾಮದ ಬಸವ ನಗರದ ದರಿದೇವರ ಹಾಗೂ ಜಕ್ಕಮ್ಮದೇವರಜಾತ್ರಾಮಹೋತ್ಸವದಲ್ಲಿದಿವ್ಯಸಾನಿಧ್ಯ ವಹಿಸಿ ಮಾತನಾಡಿ ಕೆಟ್ಟ ಚಟಗಳಿಗೆ ಅನಾವಶ್ಯಕವಾಗಿ ಖರ್ಚು ಮಾಡುವ ಬದಲು ದೇವರ ಜಾತ್ರೆ ದಾನ ಧರ್ಮಕ್ಕೆ ಖರ್ಚು ಮಾಡಿದರೆ ದರಿದೇವರು ಸಕಲ ಸೌಭಾಗ್ಯ ನೀಡುತ್ತಾನೆ ಎಂದು ಹೇಳಿದರು.

ಆಲಗೂರ ಶಾಂತಮೂರ್ತಿ ಲಕ್ಷ್ಮಣ ಮುತ್ಯಾ ಸಾನಿಧ್ಯ ವಹಿಸಿ ಮಾತನಾಡಿ ಜೀವನದಲ್ಲಿ ಪ್ರತಿಯೊಬ್ಬರೂ ತಪ್ಪು ತಡೆ ಮಾಡುವುದು ಸಹಜ ತಿದ್ದಿ ಬುದ್ಧಿ ಹೇಳಿ ಕ್ಷಮಿಸುವ ಗುಣ ಹೊಂದಿರಬೇಕು. ದರೀದೇವರು ಪವಾಡ ಪುರುಷರು. ಜೀವನದಲ್ಲಿ ಗೆಲುವು ಸಾಧಿಸಬೇಕಾದರೆ ಗುರುವಿನಆಶೀರ್ವಾದಬೇಕು.ಹಿಂಸಾಮೋಸವಂಚನೆ ಮಾಡುವುದು ಮಹಾಪಾಪ. ಸ್ತ್ರೀಯರು ಹಿಂದೂ ಧರ್ಮದ ಸಂಸ್ಕೃತಿಯನ್ನು ಉಳಿಸಿ ಬೆಳೆಸಿ ಪತಿವ್ರತೆ ಪಾಲಿಸಬೇಕು. ಭಕ್ತಿಯಿಂದ ಪೂಜೆ ಜಾತ್ರೆ ಮಾಡಿದಾಗ ಮಾತ್ರ ದೇವರಿಗೆ ಸಲ್ಲುತ್ತದೆಂದು ಹೇಳಿದರು. ಮಹಾದೇವ ನುಚ್ಚುಂಡಿ.ಮುತ್ತಪ್ಪ ನುಚ್ಚುಂಡಿ.ಸುಭಾಸ ಬ್ಯಾಳಿ.ಅಶೋಕ ನುಚ್ಚುಂಡಿ.ಬಸಪ್ಪ ಮಾಳಿ. ಭೀಮಪ್ಪ ನುಚ್ಚುಂಡಿ. ಪತ್ರೆಪ್ಪ ಬ್ಯಾಳಿ. ರವೀಂದ್ರ ನುಚ್ಚುಂಡಿ. ರಾಜು ಕಲ್ಮಡಿ.ಅಶೋಕ ಅಳಗೋಡಿ.ಅರ್ಜುನ ಬೋಳನ್ನವರ.ಪ್ರಕಾಶ ನುಚ್ಚುಂಡಿ. ಮಹಾಲಿಂಗ ನುಚ್ಚುಂಡಿ. ಈರಪ್ಪ ನುಚ್ಚುಂಡಿ ಸೇರಿದಂತೆ ಅನೇಕ–ರಿದ್ದರು ಕಾರ್ಯಕ್ರಮವನ್ನು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಮುರಿಗೆಪ್ಪ ಮಾಲಗಾರ ಸ್ವಾಗತಿಸಿ, ನಿರೂಪಿಸಿ.ಬಸವರಾಜ ಬೋಳನ್ನವರ ವಂದಿಸಿದರು.

### ತಾಪಂ ಅಧಿಕಾರಿ ವಿರುದ್ಧ ಸದಸ್ಯರ ಆರೋಪ, ತಾಪಂಗೆ ಪ್ರತೇಕ ಇಓ ನೇಮಕಕ್ಕೆ ಆಗ್ರಹ, 18 ರಂದು ಪ್ರತಿಭಟನೆ

## ಗ್ರಾಮದಲ್ಲಿ ಅಭಿವೃದ್ಧಿ ಕುಂಠಿತ, ತಾಪಂ ಇಓ ವಿರುದ್ಧ ಸದಸ್ಯರ ಆಕ್ರೋಶ



**ಗುಳೇದಗುಡ್ಡ:** ತಾಲೂಕಿನ ಎಲ್ಲ ಗ್ರಾಮಗಳಲ್ಲಿ ಗ್ರಾಮ ಪಂಚಾಯತಿ ವತಿಯಿಂದ ಸಮರ್ಪಕವಾಗಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಇದಕ್ಕೆ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾ–ರಿಗಳ ಕಾರ್ಯ ವೈಖರಿಯೇ ಕಾರಣ. ಗ್ರಾಮದಲ್ಲಿ ಚುನಾಯಿತ ಜನಪ್ರತಿನಿಧಿಗಳ ಮಾತಿಗೆ ತಾಪಂ ಇಓ ಬೆಲೆ ನೀಡುತ್ತಿಲ್ಲ. ತಾಪಂದಲ್ಲಿ ಖಾಯಂ ಅಧಿಕಾರಿಗಳನ್ನು ಸರ್ಕಾರ ನೇಮಿಸಬೇಕೆಂದು ಪರ್ವತಿ ಗ್ರಾಪಂ ಅಧ್ಯಕ್ಷ ಆನಂದ ರಾಠೋಡ ಆರೋಪಿಸಿದರು.

ಅವರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲೂಕಿನ 12 ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಸರ್ವ ಸದಸ್ಯರು ಕೂಡಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 12 ಗ್ರಾಮದಲ್ಲಿ ಚರಂಡಿ, ಸಿಸಿ ರಸ್ತೆ, ಮೋಹರಂ ರಸ್ತೆ, ನರೇಗಾ ಯೋಜನೆ ಕೆಲಸಗಳು, ಶಾಲಾ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿವೆ. ಈ ಕುರಿತು ಸದಸ್ಯರು ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗುತ್ತಿಲ್ಲ. ಸದಸ್ಯರು ಸಮಸ್ಯೆ ಹೇಳಲು ದೂರವಾಣಿ ಕರೆ ಮಾಡಿದರೂ ಅಧಿಕಾರಿಗಳು ಸದಸ್ಯರಿಗೆ ಸ್ಪಂದಿಸುತ್ತಿಲ್ಲ. ಬಾದಾಮಿ, ಗುಳೇದಗುಡ್ಡ ತಾಪಂ ಕಚೇರಿಗೆ ಒಬ್ಬರೆ ಇಓ ಇದ್ದುದ್ದ–ರಿಂದ ಅವರು ಎರಡೂ ಕಡೆ ಸರಿಯಾಗಿ ಕಾರ್ಯ ಮಾಡಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಗುಳೇದಗುಡ್ಡ ತಾಪಂ ಕಚೇರಿಗೆ ಪ್ರತೇಕ ಕಾಯಂ ಇಓ ಅವಶ್ಯವಿದೆ ಎಂದು ಆಗ್ರಹಿಸಿದ್ದಾರೆ.

ಗ್ರಾಪಂದಲ್ಲಿ ಪ್ರತಿ ವರ್ಷ ವಾರ್ಷಿಕ ಕ್ರಿಯಾ ಯೋಜನೆ ಸಿದ್ಧಪಡಿಸಿ ಮೇಲಾಧಿಕಾ–ರಿಗಳಿಗೆ ಸಲ್ಲಿಸಿದರೂ ಅದಕ್ಕೆ ಅನುಮೋದನೆ ಪಡೆದರೂ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಅಧಿಕಾರಿಗಳು ಕೆಲಸ ಮಾಡಿಸಲು ಮುಂದಾಗುತ್ತಿಲ್ಲ. ಮತ್ತೂ ಮೇಲಾಗಿ ನರೇಗಾದಲ್ಲಿ 20 ಪ್ಲಸ್ ಎನ್ನುವ ಕಾಯ್ದೆ ತಂದಿದ್ದು, ಅದರ ಪ್ರಕಾರ ಗ್ರಾಮದಲ್ಲಿ ಕೆಲಸ ಮಾಡಲು ಆಗುತ್ತಿಲ್ಲ. 20ಕ್ಕೂ ಹೆಚ್ಚು ಅಭಿವೃದ್ಧಿ ಕೆಲಸಗಳಿದ್ದರೆ ಅದಕ್ಕೆ 20 ಪ್ಲಸ್ ಅನುಮೋದನೆ ಪಡೆಯಬೇಕು. ಈ ಪ್ರಕ್ರಿಯೆ ಮುಗಿದರೂ ಕೂಡಾ ಗ್ರಾಮದಲ್ಲಿ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲು ಸಮಸ್ಯೆಯಾಗಿದೆ. ಅದಕ್ಕೆ ಇಓ ಅಧಿಕಾರಿಗಳು ಸಮರ್ಪಕವಾಗಿ ಸ್ಪಂದಿಸುತ್ತಿಲ್ಲ.ನಮ್ಮ ಸಮಸ್ಯೆಗೆ ಸ್ಪಂದಿಸದಿದ್ದರೆ ನ.18 ರಂದು 12 ಗ್ರಾಪಂ ಕಚೇರಿಗಳಿಗೆ ಹಾಗೂ ತಾಪಂ ಕಚೇರಿಗೆ ಬೀಗ ಹಾಕಿ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರು ಎಚ್ಚರಿಸಿದ್ದಾರೆ.

ಗ್ರಾಮದಲ್ಲಿ ರೈತರ ಕೃಷಿ ಹೊಂಡ, ಬದು ನಿರ್ಮಾಣ, ದನದ ಶಡ್ಡು ನಿರ್ಮಾಣ, ರಸ್ತೆ, ಚರಂಡಿ ಹೀಗೆ ಎಲ್ಲ ಕಾರ್ಯಗಳು ಸ್ಥಗಿತಗೊಂಡಿವೆ. ಇದಕ್ಕೆ ಪರಿಹಾರ ಕಂಡುಗೊಳ್ಳಲು ತಾಲೂಕಿನ 12 ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರು ಸಾಮೂಹಿಕವಾಗಿ ಸಭೆ ನಡೆಸಿ ಕಚೇರಿಗಳಿಗೆ ಬೀಗ ಜಡಿದು ಅಧಿಕಾರಿಗಳ ವಿರುದ್ಧ ಆರೋಪ ಮಾಡುತ್ತಿದ್ದೇವೆ. ಸರ್ಕಾರದ ಗಮನ ಸೆಳೆಯುವ ಕೆಲಸ ಮಾಡಬೇಕಾಗಿದೆ. ಶಾಸಕರು ಹಾಗೂ ಮೇಲಾಧಿಕಾರಿಗಳು ತಾಪಂ ಕಚೇರಿಗೆ ಖಾಯಂ ಇಓ ನೇಮಕ ಮಾಡಬೇಕು ಎಂದು ಆನಂದ ರಾಠೋಡ ಒತ್ತಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಹಾನಾಪೂರ ಎಸ್.ಪಿ.ಗ್ರಾಪಂ ಅಧ್ಯಕ್ಷ ಜಗದೀಶ ಹಿರೇಗೌಡರ, ಕೋಟೆಕಲ್ಲ ಉಪಾಧ್ಯಕ್ಷ ಮಲಕಾಜಪ್ಪ ಜಾಲಿಹಾಳ, ಕೆಲವಡಿ ಉಪಾಧ್ಯಕ್ಷೆ ಜ್ಯೋತಿ ಪೂಜಾರ, ಸದಸ್ಯರಾದ ಕಾಶೀನಾಥ ಪುರಾಣಿಕಮಠ, ತಾರಾಸಿಂಗ ರಾಠೋಡ, ನಾಗಪ್ಪ ಗೌಡರ, ಪುಂಡಲಿಕ ನಾಯಕ, ಪರಸಪ್ಪ ಕಡಿವಾಲರ, ಅಲಿಸಾಬ್ ವಾಲಿಕಾರ, ಹನಮಂತ ದನದಮನಿ, ಮುಖಂಡರಾದ ದೇವು ಪಮ್ಮಾರ, ಶಿವಪ್ಪ ಗೊರವರ, ಹುಚ್ಚಪ್ಪ ಮೇಟಿ, ಸಿಂಧೂರ ಕೊಳಮಲಿ ಇತರರು ಇದ್ದರು.

### ಅ.14ರಿಂದ 16ರವರೆಗೆ ಕರ್ನಾಟಕ ವಿಧಾನಮಂಡಲದ ಸಮಿತಿಯಿಂದ ಅಧ್ಯಯನ ಪ್ರವಾಸ

## ಎಸ್ಸಿ–ಎಸ್ಟಿ ಸಮುದಾಯದ ಅಭಿವೃದ್ಧಿಗೆ ಹಮ್ಮಿಕೊಂಡ ಯೋಜನೆ–ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ

**ವಿಜಯಪುರ :** ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯು ಇದೇ ನ.14ರಿಂದ 16ರವರೆಗೆ ಬೆಳಗಾವಿ ವಿಭಾಗದ ಧಾರವಾಡ, ಗದಗ, ಬಾಗಲಕೋಟೆ, ವಿಜಯಪುರ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಅಧ್ಯಯನ ಪ್ರವಾಸ ಕೈಗೊಂಡು ಈ ಜಿಲ್ಲೆಗಳಲ್ಲಿ ಎಸ್ಸಿ–ಎಸ್ಟಿ ಸಮುದಾಯದವರ ಅಭಿವೃದ್ಧಿಗಾಗಿ ಹಮ್ಮಿಕೊಳ್ಳಲಾಗಿರುವ ವಿವಿಧ ಯೋಜನೆ–ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ನಡೆಸಲಿದೆ. ಪಿ.ಎಂ.ನರೇಂದ್ರಸ್ವಾಮಿಯವರ ಅಧ್ಯಕ್ಷತೆಯಲ್ಲಿರುವ ಸಮಿತಿಯಲ್ಲಿ ಸದಸ್ಯರುಗಳಾದ ರಮೇಶ ಜಾರಕಿಹೊಳಿ, ಡಾ.ಎಂ.ಚಂದ್ರಪ್ಪ, ದುರ್ಯೋಧನ ಐಹೊಳೆ, ಜಿ.ಹಂಪಯ್ಯ ನಾಯಕ್ ಬಲ್ಲಟಗಿ, ಎಸ್.ಎಸ್.ಸುಬ್ಬಾರೆಡ್ಡಿ, ಬಸನಗೌಡ ತುರುವಿಹಾಳ್, ಅಬ್ಬಯ್ಯ ಪ್ರಸಾದ್, ಬಸವರಾಜ್ ಮತ್ತಿಮುಡ, ನೇಮಿರಾಜ್ ನಾಯ್ಕ, ಎನ್.ಶ್ರೀನಿವಾಸಯ್ಯ, ಬಿ.ದೇವೇಂದ್ರಪ್ಪ, ಕೆ.ಸಿ.ವಿರೇಂದ್ರ ಪಪ್ಪಿ, ಕೃಷ್ಣಾ ನಾಯ್ಕ ಕೆ., ಕೆ.ಎಸ್.ಬಸವಂತಪ್ಪ, ಎನ್. ರವಿಕುಮಾರ, ಡಾ.ಡಿ.ತಿಮ್ಮಯ್ಯ, ರಾಜೇಂದ್ರ ರಾಜಣ್ಣ, ಸಿ.ಎನ್.ಮಂಜೇಗೌಡ, ಶ್ರೀಮತಿ ಹೇಮಲತಾ ನಾಯಕ್ ಸೇರಿದಂತೆ ಅಧಿಕಾರಿಗಳನ್ನೊಳಗೊಂಡ ತಂಡ, ನ.14ರಂದು ಧಾರವಾಡ ಜಿಲ್ಲೆಗೆ ಭೇಟಿ ನೀಡಿ, ಅಂದು ಬೆಳಿಗ್ಗೆ 10–30ಕ್ಕೆ ಗದಗ ಜಿಲ್ಲೆಯ ಹಾಗೂ ಮಧ್ಯಾಹ್ನ 2–30 ಗಂಟೆಗೆ ಧಾರವಾಡ ಜಿಲ್ಲೆಯ ಪ್ರಗತಿ ಪರಿಶೀಲನೆ ನಡೆಸಲಿದೆ.

ನ.15ರಂದು ಬಾಗಲಕೋಟೆ ಜಿಲ್ಲೆಗೆ ಭೇಟಿ ನೀಡಿ ಬಾಗಲಕೋಟೆ ಜಿಲ್ಲೆಯಲ್ಲಿ ಬೆಳಿಗ್ಗೆ 10–30ಕ್ಕೆ ವಿಜಯಪುರ ಜಿಲ್ಲೆಯ ಹಾಗೂ ಮಧ್ಯಾಹ್ನ 2–30ಕ್ಕೆ ಬಾಗಲಕೋಟೆ ಜಿಲ್ಲೆಯ ಪ್ರಗತಿ ಪರಿಶೀಲನೆ ನಡೆಸಲಿದೆ.

ನ.16ರಂದು ಬೆಳಗಾವಿಗೆ ಭೇಟಿ ನೀಡಲಿರುವ ತಂಡ, ಬೆಳಿಗ್ಗೆ 10–30ರಿಂದ 1–30ರವರೆಗೆ ಹಾಗೂ ಮಧ್ಯಾಹ್ನ 2–30ಗಂಟೆ ಸುವರ್ಣ ವಿಧಾನಸೌಧದ 3ನೇ ಮಹಡಿಯಲ್ಲಿರುವ ಸಭಾಂಗಣದಲ್ಲಿ ಬೆಳಗಾವಿ ಜಿಲ್ಲೆಯ ಪ್ರಗತಿ ಪರಿಶೀಲನೆ ನಡೆಸಲಿದೆ.

ಸಮಿತಿಯು ಧಾರವಾಡ, ಗದಗ, ಬಾಗಲಕೋಟೆ, ವಿಜಯಪುರ ಹಾಗೂ ಬೆಳಗಾವಿ ಜಿಲ್ಲೆಗಳ ವ್ಯಾಪ್ತಿಯ ಎಲ್ಲಾ ಇಲಾಖೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಾಮಾನ್ಯ ಕಾರ್ಯಕ್ರಮಗಳು ಹಾಗೂ ಎಸ್‌ಸಿಪಿ–ಟಿಎಸ್‌ಪಿ ಯೋಜನೆಗಳಡಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಸಮುದಾಯದವರ ಕಲ್ಯಾಣ ಕಾರ್ಯಕ್ರಮಗಳು ವಿವಿಧ ಯೋಜನೆಗಳ ಅನುಷ್ಠಾನದ ಕುರಿತು ಚರ್ಚೆ ನಡೆಸಲಿದೆ.

## ಮಾನಸಿಕ ಬೆಳವಣಿಗೆಯಿಂದ ವ್ಯಕ್ತಿತ್ವ ವಿಕಸನ: ಎಸ್.ಆರ್.ಮುಗನೂರಮಠ



**ಬಾಗಲಕೋಟೆ :** ಇಚ್ಛಾಶಕ್ತಿ ಕ್ರಿಯಾ ಶಕ್ತಿಗಳು ಸಕಾರಾತ್ಮಕವಾಗಿರುವುದರಿಂದ ಮಾನವನ ಮಾನಸಿಕ ಬೆಳವಣಿಗೆಯಾಗಿ ವ್ಯಕ್ತಿತ್ವ ವಿಕಸನವಾಗುತ್ತದೆ ಎಂದು ಬಸವೇಶ್ವರ ಕಲಾ ಮಹಾವಿದ್ಯಾಲಯ ಪ್ರಾಚಾರ್ಯ ಎಸ್.ಆರ್.ಮೂಗನೂರಮಠ ಹೇಳಿದರು.

ಅವರುನಗರದಬಿ.ವಿ.ವಿ.ಸಂಘದಬಸವೇಶ್ವರ ವಾಣಿಜ್ಯಮಹಾವಿದ್ಯಾಲಯದಲ್ಲಿಗುರುವಾರ ಮ್ಯಾನೇಜ್ಮೆಂಟ್ ಸ್ಟಡೀಸ್ ವಿಭಾಗದ ಅಭಿಜ್ಞಾನ್ 2024 ಅಡಿಯಲ್ಲಿ ನಡೆದ ವ್ಯಕ್ತಿತ್ವ ವಿಕಸನ ತರಗತಿಗಳ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದರು,

ಭಾವನೆಗಳೇ ಇಲ್ಲದವನು ಪಶು ಸಮಾನ. ಭಾವನೆಗಳು ಮಾನವ ತನ್ನ ಜೀವನದ ಬಗ್ಗೆ ಕನಸು ಕಾಣಲು ಪ್ರೇರೆಪಿಸುತ್ತವೆ. ಸ್ವಪ್ನರಹಿತ ಜೀವನವನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ, ಆದ್ದರಿಂದ ಭಾವನೆಗಳು ಜ್ಞಾನಕ್ಕಿಂತ ಹೆಚ್ಚು ಪರಿಣಾಮಕಾ–ರಿಯಾಗಿದೆ, ವ್ಯಕ್ತಿತ್ವ ವಿಕಸನದಲ್ಲಿ ಮಾನಸಿಕ ಬೆಳವಣಿಗೆ ಪ್ರಮುಖಪಾತ್ರ ವಹಿಸುತ್ತದೆ. ಮನಸ್ಸು ವ್ಯಕ್ತಿತ್ವದ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತದೆ. ಇಚ್ಛಾಶಕ್ತಿ ಕ್ರಿಯಾ ಶಕ್ತಿಗಳು ಸಕಾರಾತ್ಮಕವಾಗಿದ್ದಲ್ಲಿ ಮನಸ್ಸು ಸದಾ ಉತ್ಸಾಹಭರಿತವಾಗಿರುತ್ತದೆ. ಎಲ್ಲ ಬಗೆಯ ನಂಬಿಕೆಗಳು ಮನಸ್ಸನ್ನಾಧ–ರಿಸಿರುತ್ತವೆ. ಮಾನಸಿಕವಾಗಿ ಅತಿ ಎತ್ತರಕ್ಕೆ ಬೆಳೆಯಲಾಗದಿದ್ದರೂ ಎಲ್ಲರ ಮನಸ್ಸಿಗೆ ಹತ್ತಿರವಾಗಿ ಬೆಳೆಯಬೇಕು. ಮನಸ್ಸನ್ನು ಕೆರಳಿಸಬಾರದು ಆದರೆ ಅರಳಿಸಬೇಕು. ಮನಸ್ಸನ್ನು ಅರಳಿಸಿ–ಪಳಗಿಸಿದರೆ, ಸುಖ–ದುಃಖಗಳಲ್ಲಿ ಸಮತೆಯನ್ನು ಹೊಂದಿ ಎಲ್ಲ ಕನಸುಗಳನ್ನು ನನಸಾಗಿಸಿಕೊಳ್ಳಬಹುದು ಎಂದು ನುಡಿದರು.

ಬಿ.ಬಿ.ಎ ವಿಭಾಗದ ಸಂಯೋಜಕರಾದ ಡಾ.ಎಂ.ನಂಜುಂಡಸ್ವಾಮಿ ಅವರು ವಿದ್ಯಾರ್ಥಿಗಳು ಉದ್ದೇಶಿಸಿ ಜೀವನದ ಪ್ರತಿ ಹಂತದಲ್ಲಿ ಕಲಿಕೆ ಹೆಚ್ಚಿಸಿಕೊಳ್ಳುತ್ತಾ ಯಾವುದಕ್ಕೆ ಪ್ರಾಧಾನ್ಯತೆ ಕೊಡಬೇಕು ಎಂಬುದನ್ನು ಅರಿತು ಅದಕ್ಕೆ ಆದ್ಯತೆ ಕೊಟ್ಟಾಗ ವ್ಯಕ್ತಿತ್ವ ವಿಕಾಸ ಆಗುತ್ತದೆ ಅದಕ್ಕೆ ಪ್ರತಿಯೊಬ್ಬರೂ ತಮ್ಮಲ್ಲಿನ ಆತ್ಮವಿಶ್ವಾಸ ಸ್ವಾಭಿಮಾನ ಹಾಗೂ ಸೃಜನಶೀಲತೆಯನ್ನು ಬಳಸಿ ಬೆಳೆಸಿಕೊಂಡಾಗ ವ್ಯಕ್ತಿತ್ವ ವಿಕಸನವಾಗುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಾವಿದ್ಯಾಲಯದಪ್ರಾಚಾರ್ಯರಾದಡಾ. ಜಗನ್ನಾಥ ವ್ಹಿ.ಚವ್ಹಾಣ ವಹಿಸಿಕೊಂಡಿದ್ದರು. ರಾಜೇಶ್ವರಿ ಅಯ್ಯನಗೌಡರ ಸ್ವಾಗತಿಸಿದರು. ಬಿ.ಬಿ.ಎ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ನಂದಿನಿ ದೊಡ್ಡಮನಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕುಮಾರಿ ಅಲ್ಫಿಯಾ ಪ್ರಾರ್ಥಿಸಿದರು. ಕುಮಾರಿ ರಂಜಿತಾ ವಂದಿಸಿದರು. ಕಾರ್ಯಕ್ರಮದಲ್ಲಿ ವಿಭಾಗದ ಪ್ರಾಧ್ಯಾಪಕರಾಗಿ ಶೀತಲ್ ವಿ. ಬಾರ್ಶಿ, ಗುರಮ್ಮ ಜಿ. ಬಳೆಗಾರ, ವೈಷ್ಣವಿ ವಿ. ಹಂದ್ರಾಳ ಹಾಗೂ ಮಹಾವಿದ್ಯಾಲಯದ ಎಲ್ಲ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಜೆಪಿಸಿ ಅಧ್ಯಕ್ಷ ಜಗದಾಂಬಿಕ ಪಾಲ್‌ಗೆ ವಕ್ಫ್ ಕಾಯ್ದೆ ರದ್ದತಿಗೆ ಆಗ್ರಹಿಸಿ ರೈತ ಸಂಘದಿಂದ ಮನವಿ ಸಲ್ಲಿಕೆ



**ವಿಜಯಪುರ :** ಜಿಲ್ಲೆಯಲ್ಲಿ ವಕ್ಫ ಬೋರ್ಡ್ ಕಾಯ್ದೆಯಿಂದ ರೈತರಿಗೆ ಆಗುತ್ತಿರುವ ತೊಂದರೆ ಕುರಿತು ವೀಕ್ಷಿಸಿ ರೈತರು, ಸಾರ್ವಜನಿಕರು, ಸ್ವಾಮೀಜಿಗಳಿಂದ ಮನವಿ ಸ್ವೀಕರಿಸಲು ಆಗಮಿಸಿದ ಜೆಪಿಸಿ ಅಧ್ಯಕ್ಷ ಜಗದಾಂಬಿಕ ಪಾಲ್ ಹಾಗೂ ಸಂಸದ ತೇಜಸ್ವಿ ಸೂರ್ಯ ಅವರಿಗೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ಮನವಿ ಸಲ್ಲಿಸಲಾಯಿತು.

ಜಿಲ್ಲಾ ಅಧ್ಯಕ್ಷ ಸಂಗಮೇಶ ಸಗರ ಅವರು ಮನವಿ ಸಲ್ಲಿಸಿ ಮಾತನಾಡುತ್ತಾ ವಕ್ಫ್ ಮಂಡಳಿಯಿಂದಾಗಿ ವಿಜಯಪುರ ಜಿಲ್ಲೆ ಸೇರಿದಂತೆ ಕರ್ನಾಟಕ ರಾಜ್ಯ ಹಾಗೂ ಭಾರತ ದೇಶದಲ್ಲಿ ರೈತರು, ಸಾರ್ವಜನಿಕರು ಹಾಗೂ ಮಠಾಧೀಶರಿಗೆ ಸಾಕಷ್ಟು ನಷ್ಟ ಆಗುತ್ತಿದೆ. ಹೀಗೆ ಮುಂದುವರೆದರೆ ದೇಶದಲ್ಲಿ ಯಾವ ಭೂಮಿಯ ಉಳಿಯುವುದಿಲ್ಲ. ಎಲ್ಲವೂ ವಕ್ಫ್ ಆಸ್ತಿ ಎಂದು ಘಂಟಾಘೋಷವಾಗಿ ಹೇಳುವಂತಹ ಕಾಲ ಕೂಡ ಬರುತ್ತದೆ. ಆದ್ದರಿಂದ ಈ ಕಾಯ್ದೆಯನ್ನು ಸಂಪೂರ್ಣವಾಗಿ ರದ್ದು ಮಾಡಿ ದೇಶದ ರೈತರನ್ನು ಉಳಿಸಬೇಕು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಲ್ಲಿ ಕೂಡ ಆಗ್ರಹ ಮಾಡುತ್ತೇವೆ ಎಂದರು.

ಬರಲಿರುವ ಚಳಿಗಾಲದ ಅಧಿವೇಶನದಲ್ಲಿ ಈ ವಕ್ಫ್ ಮಂಡಳಿಯ ಏಕರೂಪದ ಕಾನೂನನ್ನು ಸಂಪೂರ್ಣವಾಗಿ ತೆಗೆದುಹಾಕಿ ಈ ದೇಶವನ್ನು ಸುಭದ್ರ ಮಾಡುವಲ್ಲಿ ರೈತರಿಗೆ ಯಾವುದೇ ತೊಂದರೆ ಆಗದಿರಲು ವಿಶೇಷವಾಗಿ ಕಾಳಜಿ ವಹಿಸಿ ಹೊಸ ಕಾನೂನನ್ನು ರಚನೆ ಮಾಡಬೇಕು ಒತ್ತಾಯಿಸಿದರು.

ಈಗಾಗಲೇ ವಿಜಯಪುರದಿಂದ ಆರಂಭವಾದ ಈ ಹೋರಾಟ ರಾಜ್ಯದ 31 ಜಿಲ್ಲೆಗಳಲ್ಲಿ ಹಾಗೂ ದೇಶದ ಎಲ್ಲ ರಾಜ್ಯಗಳಲ್ಲಿ ಕೂಡ ಹಬ್ಬಿಕೊಂಡಿದೆ. ಇದು ಹೀಗೆ ಮುಂದುವರೆದರೆ ದೊಡ್ಡಮಟ್ಟದ ರೈತ ಕ್ರಾಂತಿ ಆಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಪುನರುಚ್ಚರಿಸಿದರು.

ಬಿಜೆಪಿಯ ಮುಖಂಡರಾದ ಉಮೇಶ ಕಾರಜೋಳ ಅವರು ಮಾತನಾಡುತ್ತ ಅನ್ನದಾತನನ್ನು ಪೂಜ್ಯನೀಯ ಭಾವನೆಯಿಂದ ಕಾಣುವ ದೇಶ ನಮ್ಮದು. ದೇಶದ ಬೆನ್ನೆಲುಬು ಎಂದು ರೈತರನ್ನು ಕರೆಯುತ್ತಾರೆ. ಆತ ಕಷ್ಟಪಟ್ಟು ಬಿತ್ತದೇ ಹೋದರೆ ನಾವು ಹಸಿವೆಯಿಂದ ಅಸುನೀಗಬೇಕಾಗುತ್ತದೆ. ಆದರೆ ಇಂತಹ ರೈತ ಬಾಂಧವರನ್ನು ಸಂಕಷ್ಟಕ್ಕೆ ದೂಡಲು ಕಾಂಗ್ರೆಸ್ ಹವಣಿಸುತ್ತಿದೆ. ಕೇವಲ ಅಲ್ಪಸಂಖ್ಯಾತರ ತುಷ್ಟೀಕರಣಕ್ಕಾಗಿ ಅನ್ನದಾತನ ಜಮೀನನ್ನೇ ಬಲಿ ಕೊಡಲು ಹೊಂಚು ಹಾಕುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಮಾನವೀಯತೆಯೇ ಸತ್ತು ಹೋಗಿದೆ ಎಂದು ಟೀಕಿಸಿದರು. ವಕ್ಫ್ ಹೆಸರಿನಲ್ಲಿ ರೈತರ ಜಮೀನುಗಳು ವಕ್ಫ್ ಮಂಡಳಿಗೆ ಸೇರಿವೆ ಎಂದು ನೋಟಿಸ್ ನೀಡುತ್ತಿರುವುದು ರೈತರ ಮೇಲಿನ ಗದಾಪ್ರಹಾರವಲ್ಲದೇ ಮತ್ತೇನು? ಎಷ್ಟೋ ವರ್ಷಗಳಿಂದ ಬಿತ್ತುತ್ತಿರುವ ಜಮೀನನ್ನು ಕಳೆದುಕೊಂಡ ರೈತರು ಏನು ಮಾಡಬೇಕು? ಇದು ರೈತ ವಿರೋಧಿ ನೀತಿಯಲ್ಲದೇ ಮತ್ತೇನು ಎಂದು ಪ್ರಶ್ನಿಸಿದರು.

ವಿಜಯಪುರ ಜಿಲ್ಲೆಯ ಸರ್ಕಾರಿ ಶಾಲೆಗಳನ್ನು ಕೂಡ ವಕ್ಫ್ ಮಂಡಳಿ ಆಸ್ತಿ ಅಂತ ಕೇಳಿ ಬರುತ್ತಿದೆ. ಅದನ್ನು ಕೂಡಾ ಕೈ ಬಿಡಬೇಕು ಎಂದರು.

ಈ ವೇಳೆ ಕರ್ನಾಟಕ ರಾಜ್ಯ ರೈತ ಸಂಘ ಉಪಾಧ್ಯಕ್ಷ ವೀರೇಶ ಗೊಬ್ಬೂರ, ಜಿಲ್ಲಾ ಸಂಚಾಲಕ ರಾಮನಗೌಡ ಪಾಟೀಲ ಹಾಗೂ ರಾಜ್ಯ ಯುವ ಘಟಕದ ಸಂಚಾಲಕ ಸಿದ್ಧನಗೌಡ ಪಾಟೀಲ ಸೇರಿದಂತೆ ಹಲವಾರು ರೈತರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಇದ್ದರು.

# ಎಲ್ಲ ವಕ್ಫ್ ಹಗರಣ ಬಿಜೆಪಿ ಕೂಸು: ಸಚಿವ ಎಂ.ಬಿ. ಪಾಟೀಲ



**ವಿಜಯಪುರ :** ಇನಾಂ ಹಾಗೂ ಭೂ ಸುಧಾರಣಾ ಕಾಯ್ದೆ ಅಡಿಯಲ್ಲಿ ರೈತರಿಗೆ ಹಂಚಿಕೆಯಾದ ಜಮೀನುಗಳನ್ನು ಸಹ ಮೇಲ್ಮನವಿ ಸಲ್ಲಿಸಿ ವಕ್ಫ್ ಗೆ ಮರು ಹಂಚಿಕೆಯಾಗುವ ನಿಟ್ಟಿನಲ್ಲಿ ಕಾಳಜಿ ತೋರಿ ಸುತ್ತೋಲೆ ಹೊರಡಿಸಿದ್ದ ಬಿಜೆಪಿ ಹಾಗೂ ವಕ್ಫ ಆಸ್ತಿ ಸಂರಕ್ಷಣೆ ಕಾರ್ಯಪಡೆ ರಚಿಸಲು ಕಾರ್ಯಾದೇಶ ಹೊರಡಿಸಿದ್ದ ಬಿಜೆಪಿ ಸರ್ಕಾರ ಈಗ ಹೋರಾಟದ ನಾಟಕ ಮಾಡಿ ಹಿಂದೂ ಮುಸ್ಲಿಂರ ವಿರುದ್ಧ ಕಂದಕ ಸೃಷ್ಟಿಸುತ್ತಿದೆ ಎಂದು

ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವ ಡಾ.ಎಂ.ಬಿ. ಪಾಟೀಲ ಗಂಭೀರವಾಗಿ ಆರೋಪಿಸಿದರು.

ವಕ್ಫ್ ಆಸ್ತಿ ಸಂರಕ್ಷಣೆ ವಿಷಯವಾಗಿ ಬಿಜೆಪಿ ಕೈಗೊಂಡ ಅನೇಕ ಸುತ್ತೋಲೆ, ಕಾರ್ಯಚಟುವಟಿಕೆಗಳ ಕಾರ್ಯಾದೇಶಗಳನ್ನು ದಾಖಲೆ ಸಮೇತ ಬಿಡುಗೊಳಿಸಿ ಬಿಜೆಪಿ ನಾಯಕರ ವಿರುದ್ಧ ಪ್ರಬಲ ವಾಗ್ದಾಳಿ ನಡೆಸಿದರು.

ವಕ್ಫ್ ಇಂದೀಕರಣ ಮಾಡಿಕೊಳ್ಳದ ಪರಿಣಾಮ ಇನಾಂ ಹಾಗೂ ಭೂಸುಧಾರಣಾ ಕಾಯ್ದೆಯಡಿಯಲ್ಲಿ ಹಂಚಿಕೆಯಾದ ರೈತರ ಜಮೀನನ್ನು ಸಹ ನಾವು ವಾಪಾಸ್ಸು ಪಡೆಯುವುದಿಲ್ಲ ಎಂದು ನಮ್ಮ ಸರ್ಕಾರ ರೈತರ ಪರ ಬದ್ಧತೆ ಪ್ರದರ್ಶಿಸಿದೆ, ಆದರೆ ವ್ಯತಿರಿಕ್ತವಾಗಿ ಬಿಜೆಪಿ ಈ ಹಿಂದೆ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಭೂ ಸುಧಾರಣಾ ಕಾಯ್ದೆ ಅಡಿಯಲ್ಲಿ ರೈತರಿಗೆ ಹಂಚಿಕೆಯಾದ ಜಮೀನುಗಳನ್ನು ಸಹ ಮೇಲ್ಮನವಿ ಸಲ್ಲಿಸಿ ವಕ್ಫ್ ಹಂಚಿಕೆಯಾಗುವ ನಿಟ್ಟಿನಲ್ಲಿ ಹೊರಡಿಸಿದ ಸುತ್ತೋಲೆಯನ್ನು ಬಿಡುಗಡೆಗೊಳಿಸಿದರು. ಇನಾಂ ಜಮೀನುಗಳಿಗೆ ಸಂಬಂಧಿಸಿದ ಪರಿಹಾರವನ್ನು ವಕ್ಫ್ ಮಂಡಳಿಗೆ ಕೊಡಿ ಎಂದು ಹೇಳಿದ ಬಿಜೆಪಿ ರೈತ ವಿರೋಧಿ ಹಾಗೂ ಹಿಂದೂ ವಿರೋಧಿ ಎಂದರು.

**ಸುತ್ತೋಲೆ ಪ್ರದರ್ಶಿಸಿದ ಎಂಬಿಪಿ:**

ವಕ್ಫ ಸಂರಕ್ಷಣೆ ವಿಷಯವಾಗಿಯೇ ಬಿಜೆಪಿ ಸರ್ಕಾರ ತನ್ನ ಆಡಳಿತ ಅವಧಿಯಲ್ಲಿ ಬಿಡುಗಡೆಗೊಳಿಸಿದ ಅನೇಕ ಸುತ್ತೋಲೆಗಳನ್ನು ದಿನಾಂಕ ಸಮೇತ ವಿಶ್ಲೇಷಿಸಿ ಬಿಜೆಪಿ ಅವಧಿಯಲ್ಲಿ ರೈತರ ಹಿತ ಕಡೆಗಣಿಸಿ ವಕ್ಫ್ ಆಸ್ತಿ ಸಂರಕ್ಷಣೆ ತೋರಿದ ಬಿಜೆಪಿ ಸರ್ಕಾರದ ಬದ್ಧತೆಯ ಅಂಶವನ್ನು ಎಳೆಎಳೆಯಾಗಿ ಬಿಡಿಸಿಟ್ಟರು.

2010 ರಲ್ಲಿ ಬಿಜೆಪಿ ಸರ್ಕಾರ 4–1–2010 ರಂದು ವಕ್ಫ್ ಆಸ್ತಿಯನ್ನು ಸಂರಕ್ಷಣೆಯ ಸುತ್ತೋಲೆ ಹೊರಡಿಸಿ ಆ ಆಸ್ತಿಗಳ ದಾಖಲೆ ಕ್ರಮಗೊಳಿಸುವ ಅಪಡೇಟ್ ಮಾಡುವ ಕಾರ್ಯಾದೇಶ ನೀಡಿತ್ತು.ಅದೇ ತೆರನಾಗಿ 25–5–2010 ರಂದು ಬಿಜೆಪಿ ಸರ್ಕಾರದ ಅವಧಿಯಲ್ಲಿ ಸರ್ಕಾರದ ವಿವಿಧ ನಿಗಮ ಮಂಡಳಿಗಳು ಅತಿಕ್ರಮಣ ಮಾಡಿರುವ ವಕ್ಫ್ ಆಸ್ತಿ ತೆರವುಗೊಳಿಸಲು ಬಿಜೆಪಿ ಸರ್ಕಾರ 29–5–2010 ರಂದು ಸುತ್ತೋಲೆ ಹೊರಡಿಸಿದ್ದನ್ನೂ ಪಾಟೀಲ ಪ್ರದರ್ಶಿಸಿದರು.

2–4–2011 ಪುನ: ಬಿಜೆಪಿ ಸರ್ಕಾರ ವಕ್ಫ ಆಸ್ತಿ ಸಂರಕ್ಷಣೆ ಹಾಗೂ ದಾಖಲೆಗಳ ಕ್ರಮಬದ್ಧಗೊಳಿಸುವ ಸುತ್ತೋಲೆಯನ್ನು ಅಜರ್‌ಂಟ್ ಹಾಗೂ ಇಂಪಾಟೆರ್‌ಂಟ್ ಎಂಬ ಅಡಿ ಬರಹದ ಅಡಿಯಲ್ಲಿ 29–8–2020 ಸುತ್ತೋಲೆ ಹೊರಡಿಸಿತ್ತು.

ಅದೇ ತೆರನಾಗಿ ಬಿಜೆಪಿ ಸರ್ಕಾರ 8–1–2021 ರಂದು ಇನ್ನೊಂದು ಸುತ್ತೋಲೆ ಹೊರಡಿಸಿ ಜಿಲ್ಲಾ ಮಟ್ಟದ ವಕ್ಫ್ ಆಸ್ತಿ ಸಂರಕ್ಷಣೆಗಾಗಿ 8–01–2021 ರಂದು ಜಿಲ್ಲಾ ಮಟ್ಟದ ಕಾರ್ಯಪಡೆ ರಚಿಸುವಂತೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಪೌರಾಡಳಿತ ಇಲಾಖೆಯಿಂದ ಆದೇಶ ಹೊರಡಿಸಿದ್ದೂ ಸಹ ಬಿಜೆಪಿ ಪುಣ್ಯಾತ್ಮರು ಎಂದರು.

ಇನ್ನೂ ಇಷ್ಟಕ್ಕೆ ಇವರ ಕಾಳಜಿ ನಿಂತಿಲ್ಲ, 27.01.2021 ರಂದು ಗ್ರಾಮಠಾಣಾ ವ್ಯಾಪ್ತಿಯಲ್ಲಿ ವಕ್ಫ ಆಸ್ತಿ ಸಂರಕ್ಷಣೆಗೂ ಸಹ ಆದೇಶ ಹೊರಡಿಸಿದ್ದು ಬಿಜೆಪಿ ಎಂದು ಪಾಟೀಲ ದಾಖಲೇ ಸಮೇತ ಬಿಜೆಪಿ ನಾಯಕರಿಗೆ ಟಾಂಗ್ ನೀಡಿದರು.

**ಬಿಜೆಪಿ ಒಳಜಗಳದಿಂದ ನಾಟಕ:**

ಬಿಜೆಪಿ ಆತಂರಿಕ ಒಳಜಗಳದಿಂದಾಗಿ ವಕ್ಫ ಹೋರಾಟದ ನಾಟಕವನ್ನು ಬಿಜೆಪಿಯ ನಾಟ್ಯ ಮಂಡಳಿ ಮಾಡುತ್ತಿದೆ. ಧರಣಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹಾಗೂ ಪ್ರತಿಪಕ್ಷ ನಾಯಕ ಆರ್. ಅಶೋಕ ಏಕೆಭಾಗಿಯಾಗಿಲ್ಲ ಎಂದರು.

**ಹೋರಾಟ ಏಕೆ ಕೈ ಬಿಟ್ಟೀದ್ದೀರಿ?**

ವಕ್ಫ ಕಾಯ್ದೆ ರದ್ದಾಗುವವರೆಗೂ ಸಹ ಹೋರಾಟ ನಿಲ್ಲಿಸುವುದಿಲ್ಲ ಎಂದು ಹೇಳಿದ್ದ ಧರಣಿ ನಿರತರು ಧರಣಿ ಕೈ ಬಿಟ್ಟಿದ್ದೇಕೆ? ಎಂದು ಖಾರವಾಗಿ ಪ್ರಶ್ನಿಸಿದ ಡಾ.ಪಾಟೀಲ, ಈ ಹೋರಾಟ ಇನ್ನೂ 365 ದಿನ ಮುಂದುವರೆಯಲಿದೆ, ಯತ್ನಾಳ ಏಳುವುದಿಲ್ಲ ಎಂದು ಭಾವಿಸಿದ್ದೇ, ಜೆಪಿಸಿ ಅಧ್ಯಕ್ಷರನ್ನು ಕರೆಯಿಸಿ ಅವರನ್ನು ಸಹ ನಗೆಪಾಟಲೀಗೀಡಾಗುವಂತೆ ಮಾಡಿದೆ, ಜೆಪಿಸಿ ಅಧ್ಯಕ್ಷರು ಸಹ ನಿಯಮ ಉಲ್ಲಂಘಿಸಿದ್ದು,ಜೆಪಿಸಿ ಉಳಿದ ಸದಸ್ಯರು ಅವರ ವಿರುದ್ಧ ಹಕ್ಕುಚ್ಯುತಿ ಮಂಡನೆ ಮಾಡುವ ಚಿಂತನೆಯಲ್ಲಿದ್ದಾರೆ ಎಂದರು.

ಧರಣಿ ಸ್ಥಳದಲ್ಲಿ ಸೊಳ್ಳೆಗಳ ಕಾಟ ಅಧಿಕವಾಗಿತ್ತು, ಹೀಗಾಗಿ ಧರಣಿಯಿಂದ ಎದ್ದರೇ ಎಂದು ಎಂಬಿಪಿ ಲೇವಡಿ ಮಾಡಿದರು.

**ಮಠಾಧೀಶರಿಗೂ ಮನವರಿಕೆ:**

ಹೋರಾಟದಲ್ಲಿ ಭಾಗಿಯಾದ ಮಠಾಧೀಶರು ಮುಗ್ದರು, ಕನೇರಿ ಶ್ರೀಗಳಿಗೆ ಬಿಜೆಪಿ ರಾದ್ಧಾಂತ ಗೊತ್ತಿಲ್ಲ, ಅವರಿಗೆ ಬಿಜೆಪಿ ನೈಜತೆ ಗೊತ್ತಾದರೆ ಅವರೇ ಟೀಕೆ ಮಾಡುತ್ತಾರೆ, ಹೀಗಾಗಿ ಎಲ್ಲ ದಾಖಲೆಗಳನ್ನು ಶ್ರೀಗಳಿಗೆ ಕಳುಹಿಸುವೆ ಎಂದರು.

ಮಾಜಿ ಶಾಸಕ ಪ್ರೊ.ರಾಜು ಆಲಗೂರ, ಜಿಲ್ಲಾ ಕಾಂಗ್ರೆಸ್ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ ಲೋಣಿ, ಕೆಪಿಸಿಸಿ ಸದಸ್ಯ ಅಬ್ದುಲ್ ಹಮೀದ್ ಮುಶ್ರೀಫ್, ಡಾ.ಗಂಗಾಧರ ಸಂಬಣ್ಣಿ, ಡಾ.ಮಹಾಂತೇಶ ಬಿರಾದಾರ ಮೊದಲಾದವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

**ರೈತರಿಗೆ ನೀರು ಕೊಟ್ಟವ ನಾನು ಅವರಿಗೆ ಅನ್ಯಾಯವಾಗಲು ಬಿಡುವನೇ?**

ವಕ್ಫ್ ವಿಷಯದಲ್ಲಿ ಕಳೆದ ವಾರದಿಂದ ನಿರಂತರವಾಗಿ ಅನೇಕ ಬೆಳವಣಿಗೆಗಳು ರಾಷ್ಟ್ರಮಟ್ಟದಲ್ಲಿ ಸದ್ದು ಮಾಡಿವೆ, ಸುಳ್ಳು ಪ್ರಚಾರ ವ್ಯಾಪಕವಾಗಿ ನಡೆದಿದೆ.

ಈ ಹಿಂದೆಯೂ ಸ್ಪಷ್ಟಪಡಿಸಿದಂತೆ ವಿಜಯಪುರ ಜಿಲ್ಲೆಯ ಒಂದೇ ಒಂದು ಇಂಚು ರೈತರ, ಮಠಗಳ, ದೇವಾಲಯಗಳ ಹಾಗೂ ಯಾವುದೇ ಧರ್ಮದ ಜಮೀನು ವಕ್ಫ್ ಪಾಲಾಗುವುದಿಲ್ಲ, ಈ ಬಗ್ಗೆ ಮುಖ್ಯಮಂತ್ರಿಗಳೇ ಸ್ಪಷ್ಟವಾಗಿ ಹೇಳಿದ್ದಾರೆ, ಕಂದಾಯ ಇಲಾಖೆಯ ಹಾಗೂ ಅಲ್ಪಸಂಖ್ಯಾತ ಸಚಿವರು ಸಹ ಇದನ್ನು ಪುನರುಚ್ಚರಿಸಿದ್ದಾರೆ. ವಕ್ಫ್ ಇಂದೀಕರಣ ಮಾಡಿಕೊಳ್ಳದ ಸಾವಿರಾರು ಎಕರೆ ವಕ್ಫ್ ಭೂಮಿ ಇನಾಂ ಹಾಗೂ ಭೂ ಸುಧಾರಣಾ ಕಾಯ್ದೆಯಡಿಯಲ್ಲಿ ಈಗಾಗಲೇ ರೈತರಿಗೆ ಹಂಚಿಕೆಯಾಗಿರುವ ಜಮೀನನ್ನು ಸಹ ಯಾವುದೇ ಕಾರಣಕ್ಕೂ ವಾಪಾಸ್ಸು ಪಡೆಯುವುದಿಲ್ಲ ಎಂದು ಸರ್ಕಾರ ಸ್ಪಷ್ಟನೆ ರೈತರಿಗೆ ನೀರು ಕೊಟ್ಟ ನಾನು ಅವರ ಅವರಿಗೆ ಅನ್ಯಾಯವಾಗಲು ಬಿಡಲು ಸಾಧ್ಯವೇ? ಎಂದರು.

# ಸೃಜನಶೀಲರಾಗಿದ್ದರೆ ಸೃಜನಾತ್ಮಕ ಕಲಾಕೃತಿ ರಚಿಸಲು ಸಾಧ್ಯ: ಪ.ಸ. ಕುಮಾರ್

**ವಿಜಯಪುರ :** ಕಲಾವಿದರು ಸೃಜನಶೀಲರಾಗಿದ್ದರೆ ಸೃಜನಾತ್ಮಕ ಕಲಾಕೃತಿ ರಚಿಸಲು ಸಾಧ್ಯ ಎಂದು ಲಲಿತಕಲಾ ಅಕಾಡೆಮಿ ಅಧ್ಯಕ್ಷ ಪ.ಸ.ಕುಮಾರ್ ಹೇಳಿದ್ದಾರೆ.

ನಗರದ ಸರಕಾರಿ ಆರ್ಟ್ ಗ್ಯಾಲರಿಯಲ್ಲಿ ಕ್ಯಾನವಾಸ ಆರ್ಟ್ ಫೌಂಡೇಶನ್ ಆಯೋಜಿಸಿದ ಕಲಾವಿದ ರಮೇಶ ಚವ್ಹಾಣ ಅವರ "ನನ್ನ ಅಭಿವ್ಯಕ್ತಿ" ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಉದ್ಘಾಟಿಸಿ ಮಾತನಾಡಿದರು. ಕಲಾವಿದರು ಸೃಜನಶೀಲರಾಗಿದ್ದರೆ ಸೃಜನಾತ್ಮಕ ಕಲಾಕೃತಿ ರಚಿಸಲು ಸಾಧ್ಯ ಮತ್ತು ಕಲೆ ನಿಂತ ನೀರಾಗಬಾರದು ಎಂದು ತಿಳಿಸಿದರು.

ಕಲಾವಿದ ನಿರಂತರವಾಗಿ ಕೃತಿ ರಚನೆಯಲ್ಲಿ ತೊಡಗಿದರೆ ಅತ್ಯಂತ ಸುಂದರ ಜೀವನ ಅವನದಾಗುತ್ತದೆ. ದೃಶ್ಯ ಕಲಾ ಪ್ರಕಾರಗಳಲ್ಲಿ ಹಲವಾರು ವಿಷಯಗಳಿದ್ದು ಅದರಲ್ಲೂ ನವ್ಯಕಲೆಯು ಅತ್ಯಂತ ಕಷ್ಟದ ಕೆಲಸ. ಅದರಲ್ಲಿ ಸಿದ್ಧಹಸ್ತರಾದ ಯುವ ಕಲಾವಿದ ರಮೇಶ ಚವ್ಹಾಣ ತಮ್ಮ ಕೆಲಸದಲ್ಲಿ ಸಾಧನೆ ಮಾಡುತ್ತಿದ್ದಾರೆ ಎಂದರು.

# ಮೌನವಾದ 'ಜಮಖಂಡಿ ಜಿಲ್ಲೆ' ಕೂಗು ಓಲೇಮಠ ಶ್ರೀಗಳಿಗೆ ನುಡಿನಮನ



**ರಬಕವಿ–ಬನಹಟ್ಟಿ :** ಐದು ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡುತ್ತಿದ್ದ ಜಮಖಂಡಿಯ ಓಲೇಮಠದ ಡಾ. ಅಭಿನವ ಕುಮಾರ ಚೆನ್ನಬಸವ ಸ್ವಾಮೀಜಿ ಲಿಂಗೈಕ್ಯರಾಗಿದ್ದಕ್ಕೆ ಭಕ್ತರೊಂದಿಗೆ ಸಾಹಿತ್ಯ ಕ್ಷೇತ್ರಕ್ಕೂ ತುಂಬಲಾರದ ಹಾನಿಯಾಗಿದೆ ಎಂದು ಹಿರಿಯ ಸಾಹಿತಿ ಸಿದ್ಧರಾಜ ಪೂಜಾರಿ ತೀವ್ರ ಬೇಸರ ವ್ಯಕ್ತಪಡಿಸಿದರು.

ಶುಕ್ರವಾರ ಸಂಜೆ ಬನಹಟ್ಟಿಯ 'ಬಸವ ಸಂಪದ' ಬಳಗದಿಂದ ಶ್ರೀಗಳಿಗೆ ನುಡಿ ನಮನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 65 ನೇ ವಯಸ್ಸಿನಲ್ಲಿ ಹೃದಯಾಘಾತದಿಂದ ವಿಧಿವಶರಾಗಿದ್ದು ನೋವುಂಟು ಮಾಡಿದೆ.

ಜಮಖಂಡಿ ಪ್ರತ್ಯೇಕ ಜಿಲ್ಲಾ ರಚನೆಗೆ ಮುಂಚೂಣಿ ಹೋರಾಟದೊಂದಿಗೆ ಜಮಖಂಡಿ ವಿಭಾಗದ ಸುತ್ತಲಿನ ತಾಲೂಕುಗಳ ಮಠಾಧೀಶರನ್ನು ಮುಂದಾಗಿಸಿಕೊಂಡು ಹೋರಾಟದಲ್ಲಿ ಮುಂಚೂಣಿ ಪಾತ್ರ ವಹಿಸಿದ್ದರು. ಇದೀಗ ಇವರ ಅಗಲಿಕೆಯಿಂದ 'ಜಮಖಂಡಿ ಜಿಲ್ಲೆ' ಕೂಗು ಮೌನವಾದಂತಾಗಿದೆ ಎಂದು ಪೂಜಾರಿ ತಿಳಿಸಿದರು.

ಮಲ್ಲಿಕಾರ್ಜುನ ಹುಲಗಬಾಳಿ ಮಾತನಾಡಿ, ಹಂಪಿಯಲ್ಲಿ ಎಂ.ಎ. ಪಿಎಚ್ಡಿ ಮುಗಿಸಿ, ನಾಲ್ಕು ಪ್ರಬಂಧ, ಎಪ್ಪತ್ತಕ್ಕೂ ಅಧಿಕ ಕೃತಿಗಳನ್ನು ರಚಿಸುವ ಮೂಲಕ ಸಾಹಿತ್ಯದ ಕಂಪು ಮೈಗೆ ಹಚ್ಚಿಕೊಂಡು ಬೆಳೆದವರಾಗಿದ್ದರು ಎಂದರು.

ಇದೇ ಸಂದರ್ಭ ಮಕ್ಕಳ ಸಂಗಮದ ಅಧ್ಯಕ್ಷ ಜಯವಂತ ಕಾಡದೇವರ,

ಹಿರಿಯ ಸಾಹಿತಿಗಳಾದ ಜಿ. ಎಸ್. ವಡಗಾಂವಿ, ಎಂ. ಎಸ್. ಬಾದಾಮಿ, ಎಸ್. ಎಂ. ದಾಶ್ಯಾಳ, ಯಶವಂತ ವಾಜಂತ್ರಿ,

ಕಸಾಪ ತಾಲೂಕು ಅಧ್ಯಕ್ಷ ಮ. ಕೃ. ಮೇಗಾಡಿ, ದಾನಪ್ಪ ಆಸಂಗಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಸಾಧನೆಗೆ ಎಂದು ಬಡತನ ಅಡ್ಡಿಯಾಗಿಲ್ಲ: ಎ.ಎಸ್. ಪಾವಟೆ

**ಬೀಳಗಿ :** ಭಾರತ ದೇಶದ ಸಂಸ್ಕೃತಿ ಧಾರ್ಮಿಕ ನೆಲೆಗಟ್ಟಿನ ಮೇಲೆ ನಿಂತಿದೆ. ಪುಣ್ಯ ಜೀವಿಗಳು ಮಾತ್ರ ಶಿಕ್ಷಕರಾಗಿ ಹುಟ್ಟುತ್ತಾರೆ. ಸಾಧನೆಗೆ ಎಂದು ಬಡತನ ಅಡ್ಡಿಯಾಗಿಲ್ಲ ಎಂದು ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಎ. ಎಸ್. ಪಾವಟೆ ಹೇಳಿದರು.



ತಾಲೂಕಿನ ಚಿಕ್ಕಾಲಗುಂಡಿ ಗ್ರಾಮದ ಸರಕಾರಿ ಪದವಿ ಪೂರ್ವ ಕಾಲೇಜು ವತಿಯಿಂದ ಹಮ್ಮಿಕೊಂಡ ಪಿ.ಎಚ್‌ಡಿ ಪದವಿ ಪಡೆದ ಡಾ. ಅರುಣ ಖಾನಾಪುರ, ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾದ ಪ್ರೌಢ ಶಾಲೆ ಮುಖ್ಯೋಪಾಧ್ಯಾಯ ಎಸ್. ಸಿ. ಕರಿಸ್ಸೆಯಪ್ಪನವರ ಅವರ ಅಭಿನಂದನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿ, ಮನಸ್ಸು ಮಾಡಿದರೆ ಏನೆಲ್ಲ ಸಾಧನೆ ಸಾಧ್ಯ ಎಂದರು.

ಎಸ್‌ಡಿಎಂಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಮಠದ ಶಿವಶರಣಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿ, ಮುಂದೆ ನಾವು ಏನು ಮಾಡಬೇಕು ಎಂಬುದು ಮಹತ್ವದ್ದು. ಸಾಧಕರ ಬದುಕನ್ನು ಮಾದರಿಯಾಗಿ ಇಟ್ಟುಕೊಂಡರೆ ಬದುಕು ಶ್ರೀಮಂತವಾಗಲಿದೆ ಎಂದರು.

ಪಿ.ಎಚ್‌ಡಿ ಪದವಿ ಪಡೆದ ಡಾ. ಅರುಣ ಖಾನಾಪುರ ಸನ್ಮಾನ ಸ್ವೀಕರಿಸಿ ಮಾತನಾಡಿ, ಶಿಕ್ಷಣ ಉತ್ತಮ ಸಂಸ್ಕಾರವಂತರನ್ನಾಗಿ ಮಾಡುತ್ತದೆ. ಸತತ ಪರಿಶ್ರಮದಿಂದ ಓದಿ ಮುಂದೆ ಬಂದಿರುವೆ. ಸೂಕ್ತ ಮಾರ್ಗದರ್ಶನದಿಂದ ಪಿ.ಎಚ್‌ಡಿ ಪದವಿ ಪಡೆದಿರುವೆ. ಸತತ ಪರಿಶ್ರಮದಿಂದ ಮುಂದೆ ಬರಬಹುದು ಎಂದು ಹೇಳಿದರು.

ಪ್ರಾಚಾರ್ಯ ಡಾ. ಎಸ್. ಕೆ. ಬಂಗಾರಿ ಮಾತನಾಡಿ, ಸಾಧನೆಗೆ ಮನಸ್ಸು ಮಾಡದೆ ಇರುವುದೊಂದು ಕೊರತೆ. ಪ್ರತಿಯೊಬ್ಬರೂ ಮನಸ್ಸು ಮಾಡಿದರೆ ಅಂದುಕೊಂಡ ಸಾಧನೆ ಮಾಡಬಹುದು ಎಂಬುದಕ್ಕೆ ಡಾ. ಅರುಣ ಖಾನಾಪೂರ ಸಾಕ್ಷಿಯಾಗಿರುವರು ಎಂದು ಹೇಳಿದರು.

ಸನ್ಮಾನ ಸ್ವೀಕರಿಸಿದ ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾದ ಪ್ರೌಢ ಶಾಲೆ ಮುಖ್ಯೋಪಾಧ್ಯಾಯ ಎಸ್. ಸಿ. ಕರಿಸ್ಸೆಯಪ್ಪನವರ ಹಾಗೂ ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ. ಎಂ. ಸಾವಕಾರ ಮಾತನಾಡಿದರು.

ಉಪನ್ಯಾಸಕ ವೈ. ಎಸ್. ರೂಗಿ ಪರಿಚಯಿಸಿದರು. ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಬಾಬು ಕೆಂಪಲಿಂಗಣ್ಣವರ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಗ್ರಾಪಂ ಮಾಜಿ ಅಧ್ಯಕ್ಷ ಎಂ. ಎಸ್. ಕೆಂಪಲಿಂಗಣ್ಣವರ,

ಗ್ರಾಪಂ ಮಾಜಿ ಅಧ್ಯಕ್ಷ ಮಲ್ಲಪ್ಪ ಕೆಂಪಲಿಂಗಣ್ಣವರ, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಸಿದ್ದಪ್ಪ ನಾ ಮುಶಪ್ಪಗೋಳ ಮತ್ತಿತರಿದ್ದರು.

ಚಂದ್ರಶೇಖರ ತುಂಬರಮಟ್ಟಿ ಸ್ವಾಗತಿಸಿದರು. ಮಂಜುನಾಥ ಧೂರನ್ನವರ, ಎಸ್. ಎಸ್. ದಿಬ್ಬದಮನಿ ನಿರೂಪಿಸಿದರು. ಪವಿತ್ರಾ ಲಗಳಿ ವಂದಿಸಿದರು.

# ಪ್ರಮುಖ ಕುಸ್ತಿಗಳು ಸಮಬಲ–ಅಭಿಮಾನಿಗಳ ನಿರಾಸೆ: ಚಿಮ್ಮಡದಲ್ಲಿ ನಡೆದ ಅಂತರಾಷ್ಟ್ರೀಯ ಜಂಗೀ ಕುಸ್ತಿಗಳು

**ವರದಿ : ಇಲಾಹಿ ಇ. ಜಮಖಂಡಿ**







**ಚಿಮ್ಮಡ :** ಗ್ರಾಮದಲ್ಲಿ ನಡೆದ ಅಂತರಾಷ್ಟ್ರೀಯ ಮಟ್ಟದ ಜಂಗೀ ನಿಕಾಲಿ ಕುಸ್ತಿ ಪಂದ್ಯಾವಳಿಯಲ್ಲಿ ಹಲವಾರು ಅಗ್ರ ಕ್ರಮಾಂಕದ ಕುಸ್ತಿ ಪಟುಗಳು ಭಾಗವಹಿಸಿ ತಮ್ಮ ವಿಶೇಷ ಡಾವು ಪೇಚುಗಳ ಮೇಲಾಟದ ಮೂಲಕ ನೆರೆದ ಪ್ರೇಕ್ಷಕರನ್ನು ರಂಜಿಸಿದರೆ, ಅಗ್ರ ಕ್ರಮಾಂಕದ ಆಟಗಾರರು ಸಮಬಲ ತೋರಿದ್ದರಿಂದ ಅಭಿಮಾನಿಗಳು ನಿರಾಶೆಗೊಂಡ ಘಟನೆ ಚಿಮ್ಮಡ ಗ್ರಾಮದಲ್ಲಿ ಗುರುವಾರ ರಾತ್ರಿ ನಡೆಯಿತು.

ಸ್ಥಳೀಯ ಶ್ರೀ ರಘುನಾಥಪ್ರಿಯ ಸಾಧು ಮಹಾರಾಜರ ಜಾತ್ರಾ ಮಹೋತ್ಸವದ ನಿಮಿತ್ಯ ಇಲ್ಲಿನ ಮಲ್ಲಭೂಮಿ ಗರಡಿ ಕ್ರೀಡಾ ವ್ಯಾಯಾಮ ಶಾಲೆಯ ಸಹಯೋಗದೊಂದಿಗೆ ಗುರುವಾರ ಮದ್ಯಾಹ್ನ 3 ರಿಂದ ರಾತ್ರಿ 9 ರ ವರೆಗೆ ಗ್ರಾಮದ ಸರಕಾರಿ ಆಸ್ಪತ್ರೆ ಪಕ್ಕದಲ್ಲಿರುವ ಜೈ ಹನುಮಾನ ಕುಸ್ತಿ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಅಂತರಾಷ್ಟ್ರೀಯ ಮಟ್ಟದ ಜಂಗೀ ನಿಕಾಲಿ ಕುಸ್ತಿ ಸ್ಪರ್ದೆಯಲ್ಲಿ ಇನ್ನೂರಕ್ಕೂ ಹೆಚ್ಚು ಕುಸ್ತಿ ಪಟುಗಳು ತೀವ್ರ ಸೆಣಸಾಟ ನಡೆಸಿದರು.

ಅಗ್ರ ಕ್ರಮಾಂಕದಲ್ಲಿ ಸೆಣಸಲು ಕಣಕ್ಕಿಳಿದ ಇರಾನ್ ದೇಶದ ಮಿರ್ಜಾ ಪೈಲ್ವಾನ್ ಮತ್ತು ಪಂಜಾಬ್ನ ಭೂಪೇಂದ್ರಸಿಂಗ್ ನಡುವಿನ ಕಾಳಗ ರಂಜನೀಯವಾಗಿತ್ತು. ಇಬ್ಬರೂ ಪೈಲ್ವಾನರು ತಮ್ಮ ವಿಶಿಷ್ಟ ಡಾವ ಪೇಚುಗಳನ್ನು ಪ್ರದರ್ಶಿಸಿದರು. ಸುಮಾರು ನಲವತ್ತೆಂಟು ನಿಮಿಷಗಳ ಕಾಲ ಸೆಣಸಾಟ ನಡೆಸಿದರೂ, ಫಲಿತಾಂಶ ಬಾರದ ಕಾರಣ ನಿರ್ಣಾಯಕರು ಸಮಬಲದ ಕುಸ್ತಿಯೆಂದು ಘೋಷಿಸಿದರು.

ಪ್ರೇಕ್ಷಕರ ಮನ ಸೆಳೆದ ಇನ್ನೊಂದು ಜೋಡಿಯೆಂದರೆ ಜಮ್ಮುವಿನ ಭಿನಿಯಾ ಪೈಲ್ವಾನ್ ಹಾಗೂ ಶೋಭೋತ್ ಪೈಲ್ವಾನ್ ಪಾಟೀಲರದ್ದು. ಇವರ ಸೆಣಸಾಟ ಪ್ರೇಕ್ಷಕರಲ್ಲಿ ತೀವ್ರ ಕುತೂಹಲ ಮೂಡಿಸಿತ್ತು. ಹದಿನೈದು ನಿಮಿಷಗಳ ಕಾಲ ನಡೆದ ತೀವ್ರ ಸೆಣಸಾಟ ಪ್ರೇಕ್ಷಕರನ್ನು ಉಸಿರು ಬಿಗಿ ಹಿಡಿದು ತುದಿಗಾಲಿನಲ್ಲಿ ನಿಲ್ಲುವಂತೆ ಮಾಡಿತ್ತು. ಯಾರು ವಿಜಯಶಾಲಿ ಯಾಗುತ್ತಾರೆ ಎನ್ನುವ ಕುತೂಹಲ ಹಲವರ ಎದೆಬಡಿತ ಹೆಚ್ಚಿಸಿತ್ತು. ಆದರೆ ಕೊನೆಗೆ ಶೋಭೋತ್ ಪೈಲ್ವಾನ್ ಪಾಟೀಲ ವಿಜಯಮಾಲೆ ಧರಿಸಿದರು.

ಮೂರನೇ ಕ್ರಮಾಂಕದ ಆಟಗಾರರಾದ ಮಹಾರುದ್ರ ಪೈಲ್ವಾನ್ ಕಾಳೆ ಹಾಗೂ ಸಂತೋಷ ಪೈಲ್ವಾನ್ ಜಗತಾಪ್ ಈ ಜೋಡಿ ಸುಮಾರು 40 ನಿಮಿಷಗಳ ಕಾಳಗದಲ್ಲಿ ಇಬ್ಬರೂ ಪೈಲವಾನರು ಏಟಿಗೆ ಎದುರೇಟು ನೀಡಿ ಪ್ರೇಕ್ಷಕರಲ್ಲಿ ಕುತೂಹಲ ಮೂಡಿಸಿದ್ದರು. ಕೊನೆಗೆ ದಣಿದ ಸಂತೋಷ ಪೈಲ್ವಾನ್ ಜಗತಾಪ್ ಸಮಬಲ ಘೋಷಿಸಲು ಮನವಿ ಮಾಡಿದರು. ನಿರ್ಣಾಯಕರು ಪಾಯಿಂಟ್ ಆಧಾರದಲ್ಲಿ ಮಹಾರುದ್ರ ಪೈಲ್ವಾನ್ ಕಾಳೆಯವರನ್ನು ವಿಜೇತ ಎಂದು ಘೋಷಿಸಿದರು.

ನ್ಯಾಷನಲ್ ಚಾಂಪಿಯನ್ ಕಾರ್ತಿಕ ಪೈಲ್ವಾನ್ ಕಾಟೆ ಜೊತೆ ಮೈದಾನಕ್ಕಿಳಿದ ತೇಜಾ ಪೈಲ್ವಾನ್ ಪಂಜಾಬ ಸುಮಾರು ಒಂದು ಘಂಟೆ ಹತ್ತು ನಿಮಿಷಗಳ ಕಾಲ ತೀವ್ರ ಸೆಣಸಾಟ ನಡೆಸಿದರೂ ಸಮಬಲದಲ್ಲಿಯೇ ಆಟವಾದ ಕಾರಣ ಇಬ್ಬರನ್ನೂ ವಿಜೇತರೆಂದು ಘೋಷಿಸಲಾಯಿತು.

ಐದನೇ ಕ್ರಮಾಂಕದಲ್ಲಿ ಆಡಲು ಕಣಕ್ಕಿಳಿದ ಶಿವಯ್ಯ ಪೈಲ್ವಾನ್ ಪೂಜಾರಿ ಹಾಗೂ ಹಣಮಂತ ಪೈಲ್ವಾನ್ ಪುರಿಯವರ ಆಟ ಪ್ರೇಕ್ಷಕರನ್ನು ತುದಿಗಾಲ ಮೇಲೆ ನಿಲ್ಲುವಂತೆ ಮಾಡಿತ್ತು. ಆದರೆ ಹಣಮಂತ ಪೈಲ್ವಾನ್ ಪುರಿಯವರು ತೀವ್ರ ಸೆಣಸಾಟದಲ್ಲಿ ಗಾಯ ಮಾಡಿಕೊಂಡ ಕಾರಣ ಶಿವಯ್ಯ ಪೈಲ್ವಾನ್ ಪೂಜಾರಿಯವರನ್ನು ವಿಜೇತರೆಂದು ಘೋಷಿಸಲಾಯಿತು.

ಮಾಯಪ್ಪಾ ಪೈಲ್ವಾನ್ ಅಥಣಿ, ಸಂತೋಷ ಪೈಲ್ವಾನ್ ಪಡವಳಕರ ನಡುವೆ ನಡೆದ ಒಂಭತ್ತನೇ ಕ್ರಮಾಂಕದ ವಿಜೇತರಿಗಾಗಿ ಸ್ಥಳೀಯ ಕುಸ್ತಿ ಪ್ರೇಮಿ ರಾಯಪ್ಪಾ ಬಳಗಾರ ಬೆಳ್ಳಿ ಗದೆ ನೀಡುವ ವಾಗ್ದಾನ ಮಾಡಿದ್ದರು. ಕೇವಲ ಇಪ್ಪತ್ತು ನಿಮಿಷಗಳಲ್ಲೇ ಚಿತ್ ಮಾಡುವ ಮೂಲಕ ಮಾಯಪ್ಪಾ ಪೈಲ್ವಾನ್ ಅಥಣಿ ವಿಜಯಮಾಲೆ ಧರಿಸಿ ಬೆಳ್ಳಿ ಗದೆ ತಮ್ಮದಾಗಿಸಿಕೊಂಡರು.

ಇನ್ನೊಂದು ವಿಶೇಷ ಆಕರ್ಷಣೆಯಾದ ಪ್ರೇಮಾ ಕುಂಬಾರ ಹಾಗೂ ಶ್ರೇಯಾ ಹಳಿಂಗಳಿಯವರ ನಡುವೆ ನಡೆದ ಮಹಿಳಾ ಕುಸ್ತಿ ಸ್ಪರ್ಧೆ. ಈ ಪಂದ್ಯದಲ್ಲಿ ಪ್ರೇಮಾ ಕುಂಬಾರ ಕೇವಲ ಹದಿನೈದು ನಿಮಿಷಗಳಲ್ಲಿಯೇ ಶ್ರೇಯಾ ಹಳಿಂಗಳಿಯವರಿಗೆ ಮುಗಿಲು ತೋರಿಸಿ ವಿಜಯಮಾಲೆ ಧರಿಸಿದರು.

ವಿಜೇತ ಪೈಲವಾನರಿಗೆ ಅವರ ಅಭಿಮಾನಿಗಳು ನಗದು ಬಹುಮಾನ, ಬೆಳ್ಳಿಯ ಖಡೆ, ಥಾಲಗಳನ್ನು ನೀಡಿ ಖುಷಿಪಟ್ಟರು.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀ ಪ್ರಭು ಮಹಾಸ್ವಾಮಿಗಳು ಹಾಗೂ ಶ್ರೀ ಜನಾರ್ಧನ ಮಹಾರಾಜರು ಯರಗಟ್ಟಿಕರ ವಹಿಸಿದ್ದರು. ಶಾಸಕ ಸಿದ್ದು ಸವದಿ, ಬಾಬಾಗೌಡ ಪಾಟೀಲ, ರಾಮಣ್ಣ ಮುಗಳಖೋಡ, ಪುಂಡಲಿಕಪ್ಪ ಪೂಜಾರಿ, ಬಾಳಪ್ಪಾ ಹಳಿಂಗಳಿ, ಅಣ್ಣಪ್ಪಗೌಡ ಪಾಟೀಲ, ಪ್ರಭು ನೇಸೂರ, ಬಿ. ಎಸ್. ಪಾಟೀಲ, ಪರಪ್ಪಾ ಪಾಲಭಾಂವಿ, ಪ್ರಭು ಮುಧೋಳ, ವಿಜಯಕುಮಾರ ಪೂಜಾರಿ ಸೇರಿದಂತೆ ಹಲವಾರು ಜನ ಪ್ರಮುಖರು ಆಗಮಿಸಿದ್ದರು.

ನಿರ್ಣಾಯಕರಾಗಿ ಗುರಲಿಂಗಪ್ಪಾ ಪೂಜಾರಿ, ಮಾರುತಿ ಮಮದಾಪೂರ, ಪುಂಡಲಿಕ ಪರೀಟ, ಬಸು ಪೈಲ್ವಾನ್ ಮಮದಾಪೂರ, (ಕೋಟ್) ವಿನೋದ ಪೈಲ್ವಾನ್ ಬಳಗಾರ (ಕೋಟ್) ಭಾಗವಹಿಸಿದ್ದರು. ನಿರೂಪಣೆ ಹಾಗೂ ವೀಕ್ಷಕ ವಿವರಣೆಯನ್ನು ಸದಾಶಿವ ಪಕಾಲಿ ಸೊಗಸಾಗಿ ಮಾಡಿದರು. ಇದೇ ಸಂದರ್ಭದಲ್ಲಿ ಮಾಜಿ ಕುಸ್ತಿ ಪಟುಗಳಾದ ಕಲ್ಲಪ್ಪ ಪೈಲ್ವಾನ್ ಶಿರೋಳ, ಅವಧೂತ್ ಪೈಲ್ವಾನ್ ವಡೆಯರ್, ಲೋಕೇಶ ಪೈಲ್ವಾನ್ ಯಲಿಶೆಟ್ಟಿ, ಸಲಾವುದ್ದೀನ ಪೈಲ್ವಾನ್ ಬಿಜಾಪೂರ ಅವರನ್ನು ಸತ್ಕರಿಸಲಾಯಿತು.

# ಪ್ರತಿ ಭಾಷೆಯೂ ಅದರದೇ ಆದ ಶಕ್ತಿ ಹೊಂದಿರುತ್ತದೆ

**ಧಾರವಾಡ** : ಮನುಷ್ಯ ಭಾಷೆಯು ಯಾವುದೂ ದೇವ ಭಾಷೆಯಲ್ಲ. ಪ್ರತಿಯೊಂದು ಭಾಷೆಯೂ ಅದರದೇ ಆದ ಶಕ್ತಿಯನ್ನು ಹೊಂದಿರುತ್ತದೆ ಎಂದು ಬೆಂಗಳೂರಿನ ಕನ್ನಡ ವಿಶ್ರಾಂತ ಪ್ರಾಧ್ಯಾಪಕ ಸಿ.ಪಿ. ನಾಗರಾಜ ಮಾತನಾಡಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ಹಮ್ಮಿಕೊಂಡಿರುವ ಧರಗೆ ದೊಡ್ಡವರು' ಸರಣಿ ಮಾಲಿಕೆಯ ಎರಡನೇ ದಿನದಡಾ. ನಾಡೋಜ ಶಂಕರ ಭಟ್' ಅವರ ಬದುಕಿನ ಕುರಿತು ಮಾತನಾಡುತ್ತಿದ್ದರು.

ಅವರು ಮುಂದುವರೆದು ಮಾತನಾಡುತ್ತಾ ಕನ್ನಡವನ್ನು ಎಲ್ಲರ ಸೊತ್ತಾಗಿ ಮಾಡಬೇಕು. ಕನ್ನಡವನ್ನು ಕನ್ನಡದ ಮೂಲಕವೇ ಮಾಡಬೇಕು. ಇಂದು ಕರ್ನಾಟಕ ವಿದ್ಯಾವರ್ಧಕ ಹಮ್ಮಿಕೊಂಡಿರುವ ಈ ಧರೆಗೆ ದೊಡ್ಡವರು ಮಾಲಿಕೆಯಲ್ಲಿ ಬರುವ ಹಿರಿಯರೆಲ್ಲರೂ ಕನ್ನಡದ ಸಾಲು ದೀಪಗಳಂತೆ ಪ್ರಜ್ವಲಿಸಿ ಕನ್ನಡದ ಭಾಷೆ, ನೆಲ, ಸಂಸ್ಕೃತಿಯನ್ನು ಬೆಳಗುತ್ತಿರುವವರು. ಈ ನಿಟ್ಟಿನಲ್ಲಿ ಮೈಸೂರಿನ ಡಾ. ಶಂಕರ ಭಟ್ಟರು ಒಬ್ಬರು. ಕನ್ನಡ ಭಾಷೆಗೆ ವ್ಯಾಕರಣದ ಚೌಕಟ್ಟನ್ನು ಹಾಕಿಕೊಟ್ಟವರು. ಕನ್ನಡದ ಭಾಷೆಯ ಇತಿಹಾಸದಲ್ಲಿ ಇಷ್ಟೊಂದು ಸುದೀರ್ಘವಾಗಿ ಕನ್ನಡ ವ್ಯಾಕರಣವನ್ನು ನೀಡಿದವರು ಮತ್ತೊಬ್ಬರಿಲ್ಲ. ಎಂಬತ್ತೆರೊಂಬತ್ತರ ಇಳಿವಯಸ್ಸಿನಲ್ಲೂ ಈಗಲೂ ಭಾಷೆಯ ವ್ಯಾಕರಣದ ಬಗ್ಗೆ ಕಾರ್ಯ ಮಾಡುತ್ತಿದ್ದಾರೆ. ಕನ್ನಡ, ಇಂಗ್ಲೀಷ, ಸಂಸ್ಕೃತ, ತುಳು ಭಾಷೆಗಳನ್ನು ಆಳವಾಗಿ ಅಧ್ಯಯನ ಮಾಡಿದವರು.



ಭಾಷಾ ವಿಜ್ಞಾನಿಯಾಗಿ ಜೀವನದುದ್ದಕ್ಕೂ ಕಾರ್ಯಮಾಡುತ್ತಾ ಬಂದಿದ್ದಾರೆ. ಎಷ್ಟೊಂದು ವಿಶ್ವವಿದ್ಯಾಲಯಗಳು ವಿದೇಶದ ವಿಶ್ವವಿದ್ಯಾಲಯಗಳು ಇವರನ್ನು ಭಾಷಾ ವಿಜ್ಞಾನದ ಬಗ್ಗೆ ಮಾತನಾಡಲು ಕರೆಯುತ್ತಾರೆ. ಅವರು ಭಾಷಾ ವಿಜ್ಞಾನದ ಬಗ್ಗೆ ಎಷ್ಟೊಂದು ಜ್ಞಾನ ಹೊಂದಿದ್ದರು ಎಂಬುದು ಗೊತ್ತಾಗುತ್ತದೆ. ಕನ್ನಡ, ಇಂಗ್ಲೀಷ ಮತ್ತು ಸಂಸ್ಕೃತ ವ್ಯಾಕರಣವನ್ನು ತುಲನೇ ಮಾಡಿದ ಶಂಕರ ಭಟ್ಟರು, ಕನ್ನಡದ ವ್ಯಾಕರಣ ಹೃದಯಕ್ಕೆ ತಟ್ಟುವಂತಹ ಸರಳವಾದ ವ್ಯಾಕರಣವಾಗಿದೆ ಎಂಬುದನ್ನು ಜಗತ್ತಿಗೆ ತೋರ್ಪಡಿಸಿದವರು ಎಂದರು.

ಡಾ. ಮೇಟಿ ಮಲ್ಲಿಕಾರ್ಜುನ ಆನ್‌ಲೈನ್‌ದಲ್ಲಿ ಮಾತನಾಡಿ, ಶಂಕರ ಭಟ್ಟರು ಸಾರ್ವಜನಿಕವಾಗಿ ತೆರೆದುಕೊಳ್ಳುವವರಲ್ಲ. ಎಂದೂ ಭಾಷಣ ಮಾಡಿದವರಲ್ಲ. ಆದರೆ ಅವರು ಕಟ್ಟಿಕೊಟ್ಟ ಭಾಷಾ ಸಂಪತ್ತು ಕನ್ನಡ ನಾಡಿಗೇ ಬಹುದೊಡ್ಡ ಕೊಡುಗೆಯಾಗಿದೆ. 35ಕ್ಕೂ ಹೆಚ್ಚು ಕೃತಿಗಳನ್ನು ಬರೆದಿರುವರು ನೂರಾರು ಸಂಶೋಧನಾ ಪ್ರಬಂಧಗಳನ್ನು ನೀಡಿರುವರು. ಇವರ ಪ್ರತಿಯೊಂದು ಕೃತಿಯೂಅತ್ಯಮೂಲ್ಯವಾದಂತದ್ದುಎಂದು ಪ್ರತಿಯೊಂದರ ಗ್ರಂಥಗಳ ಹೂರಣವನ್ನು ತಿಳಿಸಿದರು.

ಆನ್‌ಲೈನದಲ್ಲಿಯೇ ಮಕ್ಕಳೊಂದಿಗೆ ಸಂವಾದ ಮಾಡುತ್ತಾ ವಿದ್ಯಾರ್ಥಿಗಳ ಹಲವು ಪ್ರಶ್ನೆಗಳಿಗೆ ಉತ್ತರಿಸಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ಮೊಟ್ಟ ಮೊದಲಬಾರಿಗೆ ಆನ್‌ಲೈನ್ ಮೂಲಕ ಒಂದು ವಿಚಾರ ಸಂಕಿರಣವನ್ನು ನಡೆಸಿದ ಹೆಗ್ಗಳಿಕೆಗೆ ಪಾತ್ರವಾಯಿತು. ಮುನ್ನೂರು ವಿದ್ಯಾರ್ಥಿಗಳು, ಅಣ್ಣಿಗೇರಿ ಕಾಲೇಜು ಡಿ.ಜಿ ಶೆಟ್ಟಿ ಕಾಲೇಜಿನ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಶಂಕರ ಹಲಗತ್ತಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ.ಶೈಲಜಾ ಅಮರಶೆಟ್ಟಿ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಶಂಕರ ಕುಂಬಿ, ವೀರಣ್ಣ ಒಡ್ಡೀನ, ಶ್ರೀಮತಿ ವಿಶ್ವೇಶ್ವರಿ ಬ. ಹಿರೇಮಠ, ಡಾ. ಜಿನದತ್ತ ಹಡಗಲಿ, ಶಿವಾನಂದ ಭಾವಿಕಟ್ಟಿ, ನಿಂಗಣ್ಣ ಕುಂಟಿ ಸೇರಿದಂತೆ ಮುಂತಾದವರಿದ್ದರು.

# ಸಂಸ್ಥಾಪನಾ ದಿನಾಚರಣೆಗೆ ನಿರ್ಧಾರ



**ಹುಬ್ಬಳ್ಳಿ** : ಕರ್ನಾಟಕ ರಾಜ್ಯ ನದಾಫ್ ಪಿಂಜಾರ್ ಸಂಘ (ರಿ) ಶಿವಮೊಗ್ಗ, ಹುಬ್ಬಳ್ಳಿ ತಾಲೂಕಾ ಶಹರ ಹಾಗೂ ಗ್ರಾಮೀಣ ಘಟಕದ ವತಿ ಯಿಂದ ಸಭೆ ನಡೆಸಿ ದಿನಾಂಕ 16/11/2024 ಶನಿವಾರ ರಂದು ಗದಗ ಜಿಲ್ಲಾ ಘಟಕದ ಸಹಯೋಗದಲ್ಲಿ 32ನೇ ಸಂಸ್ಥಾಪನಾ ದಿನಾಚರಣೆ ಹಾಗೂ ರಾಜ್ಯಮಟ್ಟದ ಮಹಿಳಾ ಸಮಾವೇಶದಲ್ಲಿ ಎಲ್ಲಾ ಪದಾಧಿಕಾರಿಗಳು ಸಮುದಾಯದ ಬಾಂಧವರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ನಿಧರಿಸಲಾಯಿತು. ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನ ವರು ಉದ್ಘಾಟಿಸಲಿದ್ದು ಸಚಿವರಾದ ಎಚ್.ಕೆ. ಪಾಟೀಲರು.ಬಿ ಝಡ್ ಜಮೀರ್ ಅಹಮ್ಮದ್ ಖಾನ್, ಗದಗ ಜಿಲ್ಲಾ ಎಲ್ಲಾ ಶಾಸಕರು ಹಾಗೂ ರಾಜ್ಯದ ಗಣ್ಯ ವ್ಯಕ್ತಿಗಳು ಮುಖಂಡರು ಭಾಗ ವಹಿಸಲಿದ್ದಾರೆ

ಈ ಸಂದರ್ಭದಲ್ಲಿ ರಾಜ್ಯ ಮಾಜಿ ಅಧ್ಯಕ್ಷರಾದ ಹಜರತ್ ಅಲಿ ಎಮ್ ದೂಡ್ಡಮನಿ ಮತ್ತು ರಾಜ್ಯ ಘಟಕದ ಉಪಾಧ್ಯಕ್ಷರಾದ ಎಮ್ ಎಚ್ ಬೆಂಡಿಗೇರಿ, ರಾಜ್ಯ ಕಾರ್ಯ ಕಾರಣಿ ಸಮಿತಿ ಸದಸ್ಯರಾದ ರಫಿಕ್ ಅಹ್ಮದ್ ದೂಡ್ಡಮನಿ, ಜಿಲ್ಲಾ ಕಾರ್ಯದರ್ಶಿ ದಾವಲ್ ಸಾಬ್ ನದಾಫ್, ಹುಬ್ಬಳ್ಳಿ ತಾಲೂಕಾ ಶಹರ ಘಟಕದ ಅಧ್ಯಕ್ಷರಾದ ಖುದಾನ ಸಾಬ ಗೂಗಲ್, ಹುಬ್ಬಳ್ಳಿ ತಾಲೂಕಾ ಗ್ರಾಮೀಣ ಘಟಕದ ಅಧ್ಯಕ್ಷರಾದ ಇಸ್ಮಾಯಿಲ್ ಸಾಬ್ ನದಾಫ್ ಸರ್ ಉಪಾಧ್ಯಕ್ಷರಾದ ಹಜರತ್ ಅಲಿ ಎಮ್ ನದಾಫ್, ದಿವಾನ್ ಸಾಬ್ ನದಾಫ್,

ಕಾರ್ಯದರ್ಶಿ ಅಬ್ದುಲ್ ನಬಿ ನದಾಫ್ ಸಹ ಕಾರ್ಯದರ್ಶಿ ಖಾದರ್ ಬಾಷಾ ಶಿಬಾರಗಟ್ಟಿ, ಸಂಘಟನಾ ಕಾರ್ಯದರ್ಶಿ ಆರ್ ವಾಯ್ ನದಾಫ್, ಮೌಲಾ ಸಾಬ್ ನದಾಫ್, ಬಾಲೆ ಸಾಬ್ ಪೀಂಜಾರ ಎಚ್ ಎಫ್ ಬೇಟಗೇರಿ ಉಪಸ್ಥಿತರಿದ್ದರು.

# ಕಳುವಾಗಿದ್ದ ಆಟೋ ಪತ್ತೆ: ಆರೋಪಿ ಬಂಧನ



**ಲಕ್ಷ್ಮೇಶ್ವರ** : ಪೊಲೀಸ ಠಾಣಾ ವ್ಯಾಪ್ತಿಯ ಪಟ್ಟಣದ ದೂದ ಪೀರಾಂ ದರ್ಗಾದ ಹತ್ತಿರದಲ್ಲಿನ ಆಟೋ ನಿಲ್ದಾಣದಲ್ಲಿ ನಿಲ್ಲಿಸಿದ್ದ ಆಟೋರಿಕ್ಷಾ 2 ತಿಂಗಳ ಹಿಂದೆ ಕಳತನವಾಗಿತ್ತು.

ಪ್ರಕರಣವನ್ನು ದಾಖಲಿಸಿಕೊಂಡಿದ್ದ ಪೊಲೀಸರು ಎಸ್ಪಿ ಬಿಎಸ್ ನೇಮಗೌಡ ಹೆಚ್ಚುವರಿ ಎಸ್ಪಿ ಎಂ ಬಿ ಸಂಕದ ಡಿ ಎಸ್ ಪಿ ಜೆಎಚ್ ಇನಾಮದಾರ ಅವರ ಮಾರ್ಗದರ್ಶನದಲ್ಲಿ ಸಿಪಿಐ ನಾಗರಾಜ್ ಮಾಡಳ್ಳಿ ಪಿಎಸ್ಐ ಈರಣ್ಣ ರಿತ್ತಿ ಕ್ರೈಂ ಪಿಎಸ್ಐ ರಾಥೋಡ್ ಅವರ ನೇತೃತ್ವದಲ್ಲಿ ಕಳ್ಳತನ ಭೇದಿಸಲು ತಂಡ ರಚಿಸಲಾಗಿತ್ತು.

ಕೊನೆಗೂ ಪೊಲೀಸರು ಆಟೋರಿಕ್ಷಾ ಕಳುವು ಮಾಡಿದ್ದ ಆರೋಪಿ ಗದಗ ನಿವಾಸಿ ಸದ್ದಾಂ ಇಮಾಮ್ ಹುಸೇನ್ ಹುಬ್ಬಳ್ಳಿ ಎಂಬಾತನನ್ನು ಬಂಧಿಸಿ 1 ಲಕ್ಷ 50000 ಮೌಲ್ಯದ ಆಟೋ ರಿಕ್ಷಾವನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕಳ್ಳನನ್ನು ಬಂಧಿಸುವಲ್ಲಿ ಎಎಸ್ಐ ಗಳಾದ ಎನ್‌ಎ ಮೌಲ್ವಿಗುರು ಬೂದಿಹಾಳ ಮತ್ತು ಸಂಜು ಕುರುಡೂರ್ ಆರ್ ಎಸ್ ಯರಗಟ್ಟಿ ಎಂ ಬಿ ಶೇಕ್ ಎಚ್‌ಎಸ್ ಬಳ್ಳಾರಿ ಆನಂದ್ ಕುಮಾರ್ ಸಿಎಸ್ ಮಠಪತಿ ಬಿಎಸ್ ನದಾಫ ಹೆಚ್ ಐ ಕಲ್ಲಣ್ಣವರ ಪಾಂಡು ರಂಗ ರಾವ್ ಮಧುಚಂದ್ರ ಧಾರವಾಡ ಅಪ್ಪಣ್ಣ ರಾಟೋಡ್ ತಂಡದ ಸದಸ್ಯರು ಯಶಸ್ವಿಯಾಗಿದ್ದು, ತಂಡಕ್ಕೆ ಎಸ್. ಪಿ. ಬಿ. ಎಸ್. ನೇಮಗೌಡ ಅಭಿನಂದಿಸಿದ್ದಾರೆ.

# ಮತದಾರರ ನೋಂದಣಿಗೆ ವಿಶೇಷ ಅಭಿಯಾನ

**ನವಲಗುಂದ** : ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ದಿ.1-1-2025 ಅರ್ಹತಾ ದಿನವನ್ನಾಗಿ ಪರಿಗಣಿಸಿಕೊಂಡು ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ನಡೆಸಲಾಗುತ್ತಿದ್ದು, ಅರ್ಹ ಮತದಾರರನ್ನು ಸೇರ್ಪಡೆಗೊಳಿಸುವ ಸಂಬಂಧ ಇದೇ ನವೆಂಬರ್ 9 (ಶನಿವಾರ), 10 (ಭಾನುವಾರ), 23 (ಶನಿವಾರ) ಹಾಗೂ 24 (ಭಾನುವಾರ) ರಂದು ವಿಧಾನಸಭಾ ಕ್ಷೇತ್ರದಾದ್ಯಂತ ಮತದಾರರ ನೋಂದಣಿಗೆ ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಚುನಾವಣಾಧಿಕಾರಿಯು ಆದ ತಹಶೀಲ್ದಾರ ಸುಧೀರ ಸಾಹುಕಾರ ತಿಳಿಸಿದ್ದಾರೆ.



ಮತದಾರರ ಪರಿಷ್ಕರಣೆ ಸಂಬಂಧ ಈಗಾಗಲೆ ಕಳೆದ ಅಕ್ಟೋಬರ್ 29 ರಂದು ಕರಡು ಮತದಾರರ ಪಟ್ಟಿಯನ್ನು ವಿಧಾನಸಭಾ ಮತಕ್ಷೇತ್ರಗಳ ನಿಗದಿತ ಸ್ಥಳಗಳಲ್ಲಿ ಪ್ರಕಟಿಸಲಾಗಿದೆ ವಿಧಾನಸಭಾ ಕ್ಷೇತ್ರದ 234 ಮತಗಟ್ಟೆ ಕೇಂದ್ರಗಳಲ್ಲಿ ಮತದಾರರ ಪಟ್ಟಿಯ ವಿಶೇಷ ನೊಂದಣಿ ಅಭಿಯಾನ ಏರ್ಪಡಿಸಲಾಗಿದ್ದು, ಸದರಿ ಅಭಿಯಾನದಲ್ಲಿ ಯುವ ಮತದಾರರು ಮತ್ತು ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸದೇ ಇರುವ ಅರ್ಹ ಮತದಾರರು ತಮ್ಮ ಮತಗಟ್ಟೆ ಕೇಂದ್ರಗಳಿಗೆ ತೆರಳಿ ನಮೂನೆ-6ರಲ್ಲಿ ಅರ್ಜಿ ಭರ್ತಿ ಮಾಡಿ ಅದರೊಂದಿಗೆ ಅಗತ್ಯ ದಾಖಲೆಗಳನ್ನು ಮತಗಟ್ಟೆ ಅಧಿಕಾರಿಗಳಿಗೆ ಸಲ್ಲಿಸಿ ಮತದಾರರ ಪಟ್ಟಿಯಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಬೇಕು.

ಇ ಶ್ರಮ : ತಾಲ್ಲೂಕಿನಲ್ಲಿರುವ ಇ ಶ್ರಮ ನೋಂದಾಯಿತ ಕಾರ್ಮಿಕರಿಗೆ ಆದ್ಯತಾ ಪಡಿತರ ಚೀಟಿ (ಬಿಪಿಎಲ್) ನೀಡಬೇಕೆಂಬ ಸುಪ್ರೀಂಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಅರ್ಹ ಇ-ಶ್ರಮ್ ನೋಂದಾಯಿತ ಕಾರ್ಮಿಕರಿಗೆ ಆದ್ಯತಾ ಪಡಿತರ ಚೀಟಿ ನೀಡುವ ಕಾರ್ಯ ಪ್ರಾರಂಭವಾಗಿದೆ.

ಪಡಿತರ ಚೀಟಿ ಹೊಂದಿಲ್ಲದ ಇ ? ಶ್ರಮ್ ನೋಂದಾಯಿತ ಎಲ್ಲಾಅರ್ಹ ಕಾರ್ಮಿಕರು ಪಟ್ಟಣದ ಮಿನಿವಿಧಾನಸೌದದಲ್ಲಿರುವ ಆಹಾರ ಇಲಾಖೆಯನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ಟೋಲ್ ಫ್ರೀ ದೂರವಾಣಿ: 1800-425-9339 ಅಥವಾ ಸಹಾಯವಾಣಿ 1967ಕ್ಕೆ ಬೆಳಗ್ಗೆ 10ರಿಂದ ಸಂಜೆ 5.30ರ ನಡುವೆ ಸಂಪರ್ಕಿಸುವಂತೆ ತಿಳಿಸಿದ್ದಾರೆ.

# ಸಾಂವಿಧಾನಿಕ ಸಂಸ್ಥೆಗಳ ದುರುಪಯೋಗ ತಡೆಗೆ ಆಗ್ರಹಿಸಿ ಡಿಎಸ್‌ಎಸ್ ಕಾರ್ಯಕರ್ತರ ಅರೆ ಬೆತ್ತಲೆ ಮೆರವಣಿಗೆ

**ವಿಜಯಪುರ** : ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ( ಡಾ. ಡಿ.ಜಿ. ಸಾಗರ ಬಣ) ನೇತೃತ್ವದಲ್ಲಿ ಸಾಂವಿಧಾನಿಕ ಸಂಸ್ಥೆಗಳಾದ ಇಡಿ, ಐಟಿ, ಸಿಬಿಐ, ರಾಜ ಭವನಗಳನ್ನು ಕೇಂದ್ರ ಬಿಜೆಪಿ ಸರ್ಕಾರ ರಾಜಕೀಯ ಲಾಭಕ್ಕಾಗಿ ದುರುಪಯೋಗ ಪಡಿಸಿಕೊಳ್ಳುವುದನ್ನು ತಡೆಗಟ್ಟಬೇಕೆಂದು ಒತ್ತಾಯಿಸಿ ಅರೆಬೆತ್ತಲೆ ಮೆರವಣಿಗೆ ಮಾಡುವ ಮೂಲಕ ಬುಧವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಡಾ. ಅಂಬೇಡ್ಕರ್ ವೃತ್ತದಿಂದ ಅರೆ ಬೆತ್ತಲೆ ಮೆರವಣಿಗೆ ಗಾಂಧಿ ವೃತ್ತಕ್ಕೆ ತೆರಳಿ ಮಾನವ ಸರಪಳಿ ಮಾಡಿ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಮರಳಿ ಜಿಲ್ಲಾ ಅಧಿಕಾರಿಗಳ ಕಚೇರಿಗೆ ತೆರಳಿ ಜಿಲ್ಲಾ ಅಧಿಕಾರಿ ಟಿ.ಬೂ.ಬಾಲನ್ ಅವರ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಡಾ. ಡಿ.ಜಿ. ಸಾಗರ ಮಾತನಾಡಿ, ಕೇಂದ್ರ ಬಿಜೆಪಿ ಸರಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದು 10 ವರ್ಷಗಳಲ್ಲಿ ದೇಶದ ಅಖಂಡತೆಗೆ ಧಕ್ಕೆ ತಂದೊಡ್ಡಲು ಸಂವಿಧಾನ ಹಾಗೂ ಪ್ರಜಾಪ್ರಭುತ್ವಕ್ಕೆ ಅಪಚಾರ ಎಸಗುತ್ತಲಿದೆ. ದೇಶದ ಹಲವು ರಾಜ್ಯಗಳಲ್ಲಿ ಬಿಜೆಪಿಯೇತರರ ಇತರೆ ಪಕ್ಷದ ಸರಕಾರಗಳು ಜನರ ಆಶೀರ್ವಾದದಿಂದ ಬಹು ಸಂಖ್ಯಾತ ಆಯ್ಕೆ ಹೊಂದಿ ರಚನೆಗೊಂಡಿದ ಸರಕಾರಗಳನ್ನು ಏನಾದರೂ ಮಾಡಿ ಸರಕಾರವನ್ನು ಅಸ್ಥಿರಗೊಳಿಸುವ ಹುನ್ನಾರ ಮಾಡಿ ಬೇರೆ ಪಕ್ಷದಿಂದ ಆಯ್ಕೆಗೊಂಡಿರುವ ಶಾಸಕರನ್ನು ಪುಸಲಾಯಿಸಿ ಅವರ ಸ್ಥಾನಕ್ಕೆ ರಾಜಿನಾಮೆ ಕೊಡಿಸಿಯಾದರೂ ಸರಿ. ಇಲ್ಲವೆ ಸಾಂವಿಧಾನಿಕ ಸಂಸ್ಥೆಗಳಾದ ಇಡಿ. ಐಟಿ, ಸಿಬಿಐ ಹಾಗೂ ರಾಜಭವನಗಳು ಮತ್ರು ರಾಜಪಾಲರ ಅಧಿಕಾರ ರಾಜಕೀಯ ಲಾಭಕ್ಕಾಗಿ ಬಳಕೆ ಮಾಡಲು ಒತ್ತಡ ಹೇರುವುದು ತನ್ನ ವ್ಯಾಪ್ತಿಯಲ್ಲಿ ಬರುವ



ಅಪರಾಧಗಳ ತನಿಖಾ ಸಂಸ್ಥೆಯಗಳನ್ನು ರಾಜಕಿಯಗೋಸ್ಕರ ಬಳಸಿಯಾದರೂ ಜನರಿಂದ ಆಯ್ಕೆಗೊಂಡಿದ್ದ ಬಿಜೆಪಿಯೇತರ ಸರಕಾರವನ್ನು ಪತನಗೊಳಿಸಲು ಸಂಚು ರೂಪಿಸಿ ಹಿಂಬಾಗಿಲಿನಿಂದ ಬಿಜೆಪಿ ಅಧಿಕಾರದ ಗದ್ದಿಗೆಯನ್ನು ಹಿಡಿಯುವ ಕೇಂದ್ರ ಸರಕಾರದ ಈ ಹುನ್ನಾರವನ್ನು ತಡೆಗಟ್ಟಲು ಪ್ರಜಾಪ್ರಭುತ್ವವಾದಿಗಳನ್ನು ಜಾಗೃತಗೊಳಿಸಬೇಕಾಗಿದೆ ಎಂದರು.

ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವಿರೋಧಿಸಿ, ಮನುವಾದವನ್ನು ಪ್ರತಿಪಾದಿಸುವ ಕೇಂದ್ರ ಬಿ.ಜೆ.ಪಿ. ಸರಕಾರ ಸಂವಿಧಾನಿಕ ಸಂಸ್ಥೆಗಳಾದ ಇಡಿ, ಐಟಿ, ಸಿಬಿಐ ಹಾಗೂ ಚುನಾವಣಾ ಆಯೋಗಗಳಂತಹ ಮೂಲಕವೆ ಮೆಟ್ಟಿ ಹಾಕುವ ಬಾಯಿಮುಚ್ಚಿಸುವ ಪ್ಯೂಡಲ್ ರಾಜಕಾರಣದ ಮಾದರಿಯೊಂದು ದೇಶದಲ್ಲಿ ಸದ್ಯ ಚಾಲ್ತಿಯಲ್ಲಿದೆ. ಇದರ ಭಾಗವಾಗಿಯೇ ಸಿದ್ದರಾಮಯ್ಯ ಅವರ ವಿರುದ್ದ ಮುಡಾ ಪ್ರಕರಣವನ್ನು ಬಳಸಿಕೊಳ್ಳಲಾಗುತ್ತಿದೆ. ಇಂತಹ ಪ್ಯೂಡಲ್ ರಾಜಕಾರಣದ ಅಂತರ್ಯದಲ್ಲಿ ಕೋಮುವಾದ ಮನು ಸಿದ್ದಾಂತ ತನ್ನ ಆಸ್ತಿತ್ವ ಉಳಿಸಿಕೊಳ್ಳಲು ಮಿಸುಕಾಡುತ್ತಿದೆ. ಕೋಮುವಾದಕ್ಕೆ ತಡೆಗೋಡೆ ಯಂತ್ತಿರುವುದೇ ಸಿದ್ದರಾಮಯ್ಯನವರು. ರಾಜ್ಯದಲ್ಲಿ ರಾಜಕೀಯವಾಗಿ ದೊಡ್ಡ ತಡೆಗೊಡೆಯಂತಿರುತ್ತದೆ. ಸಿದ್ದರಾಮಯ್ಯನವರು ಕೇವಲ ಮುಡಾ ಪ್ರಕರಣ ಕೃತಕ ಕಾರಣಕ್ಕೆ ಹೆದರಿ ಸಿದ್ದರಾಮಯ್ಯ ಎಂಬ ಜನಪ್ರಿಯನಾಯಕ ಅಧಿಕಾರದಿಂದ ನಿರ್ಗಮಿಸುವುದು ಎಂದರೆ ಅದು ಈ ಸಮಾಜದ ಬಹುಜನರ ವಿಚಾರಧಾರೆಯ ಸೋಲು ಆಗುತ್ತದೆ. ಆದರೆ "ನೈತಿಕತೆ" ಎಂಬ ಗೂಟಕ್ಕೆ ಕಟ್ಟಿ ಬಲಿ ಹಾಕುವ ರಾಜಕೀಯ ಸಂಚಿಗೆ ಸಿದ್ದರಾಮಯ್ಯನವರು ಒಳಗಾಗದಂತೆ ಪ್ರಜಾಪ್ರಭುತ್ವವಾದಿಗಳು ನೋಡಿಕೊಳ್ಳಬೇಕಾಗಿದೆ. ರಾಜಕೀಯ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ವಂಶಪಾರಂಪರ್ಯ ರಾಜಕಾರಣಗಳಿಗೆ ಪೂರ್ಣ ವಿರಾಮ ಹಾಕುವುದಾಗಿ ಹೇಳಿ ಜನರ ವಿಶ್ವಾಸ ಗಳಿಸಿ ಅಧಿಕಾರ ಪಡೆದ ಪಕ್ಷ ಏನು ಮಾಡಿದೆ. ಭ್ರ?ಾ?ಟಚಾರದ ಹಗರಣಗಳ ರೂವಾರಿಗಳಾಗಿದ್ದ ಹಲವು ರಾಜಕೀಯ ನಾಯಕರನ್ನು ರಾಜಕೀಯ ಶುದ್ದೀಕರಣ ಮಾಡಿ ಯಾವ ರೀತಿಯಲ್ಲಿ ತಮ್ಮೊಳಗೆ ಸೇರಿಸಿಕೊಳ್ಳಲಾಯಿತು? ಜಾಖರ್ಂಡ ಮತ್ತು ದೆಹಲಿಯಲ್ಲಿ ರಾಜ್ಯದ ಮುಖ್ಯಮಂತ್ರಿಗಳನ್ನು ಹೇಗೆಲ್ಲ ನಡೆಸಿಕೊಳ್ಳಲಾಯಿತು? ಯಾವೆಲ್ಲ ರೀತಿಯಲ್ಲಿ ಜನರು ಆರಿಸಿದ ಸರಕಾರಗಳನ್ನು ಅಧಿಕಾರ ನಡೆಸಲು ಬಿಡದೆ ಅಲ್ಲಿ ತೊಡರುಗಾಲು ಹಾಕಲಾಯಿತು? ಇವೆಲ್ಲವೂ ನಮ್ಮ ಕಣ್ಣೆದುರೇ ಇದೆ ಎಂದರು.

ಜಿಲ್ಲಾ ಸಂಚಾಲಕ ಸಿದ್ದು ರಾಯಣ್ಣವರ ಮಾತನಾಡಿ, ಇದು ಸರ್ವಾಧಿಕಾರಿ ಧೋರಣೆಯೇ? ಅಧಿಕಾರದ ದಕ್ಷತೆಯೇ? ಅಥವಾ ಪ್ರಜಾತಂತ್ರದ ಅಣಕವೇ? ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಾವು ಪಾಲಿಸಬೇಕಾದಧರ್ಮಅನುಭವಿಸಬೇಕಾದ ಕರ್ಮದ ಕುರಿತು ಮತ್ತು ಅದು ಮುಂದಿನ ತಲೆಮಾರಿನ ಮೇಲೆ ಈಗಿನ ಸತ್ಯೋತ್ತರ ರಾಜಕಾರಣ ಉಂಟುಮಾಡಬಹುದಾದ ಪರಿಣಾಮದ ಕುರಿತು ಗಂಭೀರವಾಗಿ ಆಲೋಚಿಸಬೇಕಾಗಿದೆ ಎಂದರು.

ಸಂವಿಧಾನಿಕ ಸಂಸ್ಥೆಗಳಾದ ಇಡಿ, ಐಟಿ, ಸಿಬಿಐ ಮತ್ತು ರಾಜ ಭವನಗಳನ್ನು ರಾಜಕೀಯ ಉದ್ದೇಶಗಳಿಗಾಗಿ ದುರ್ಬಳಕೆ ಮಾಡಿಕೊಳ್ಳಬಾರದು. ಅಪರಾಧಗಳ ತನಿಖೆ ಸಂಸ್ಥೆಗಳಿಗಾಗಿಯೇ ಉಳಿಯಬೇಕೆಂದು ಹಾಗೂ ನೈತಿಕತೆ ಎಂಬ ಗೂಟಕ್ಕೆ ಕಟ್ಟಿ ಬಲಿ ಹಾಕುವ ರಾಜಕೀಯ ಸಂಚಿಗೆ ಸಿದ್ದರಾಮಯ್ಯನವರು ಒಳಗಾಗದಂತೆ ಪ್ರಜಾಪ್ರಭುತ್ವವಾದಿಗಳು ಜಾಗೃತಾವಾಗಬೇಕಾಗಿದೆ ಎಂದರು

ಈ ಸಂದರ್ಭದಲ್ಲಿ ದಲಿತ ವಿದ್ಯಾರ್ಥಿ ಒಕ್ಕೂಟ ಜಿಲ್ಲಾ ಸಂಚಾಲಕರು ವಾಯ್.ಸಿ. ಮಯೂರ, ರಮೇಶ ಧರಣಾಕರ, ಮಹಾಂತೇಶ ಸಾಸಾಬಾಳ, ಶರಣಗೌಡ ಪಾಟೀಲ, ವಿಜಯ ಕಾಂಬಳೆ, ಅರುಣ ಗವಾರಿ, ರಮೇಶ ನಿಂಬಾಳಕರ, ಬಾಬು ಗುಣಮಿ, ರಾಮಚಂದ್ರ ದೊಡಮನಿ, ಪ್ರಶಾಂತ ತೊರವಿ, ಜೈಭೀಮ ತಳಕೇರಿ, ಜಾನು ಗುಡಿಮನಿ, ಚೇತನ ರಾಯಣ್ಣವರ, ಶಿವರುದ್ರ ಮೂಲಿಮನಿ, ಯಮನೂರಿ ಬೆಕ್ಕಿನಾಳ, ನಾಗು ರೆಡ್ಡಿ, ಸೋಮು ಬಡಿಗೇರ, ಮಲಕಪ್ಪ ಹಾದಿಮನಿ ಮತ್ತಿತರರು ಉಪಸ್ಥಿತರಿದ್ದರು.

# ನೀರು ಮತ್ತು ಮಣ್ಣು ಪ್ರಕೃತಿಯ ಸಂಪತ್ತು




**ಬೀಳಗಿ** : ನೀರು ಮತ್ತು ಮಣ್ಣು ಪ್ರಕೃತಿಯ ಸಂಪತ್ತು. ಇವುಗಳನ್ನು ಉಳಿಸಿಕೊಂಡು ಹೋಗುವ ಕೆಲಸ ನಮ್ಮದಾಗಬೇಕು. ರೈತರು ಇಂದು ಹೊಸ ತಂತ್ರಜ್ಞಾನಗಳ ಬಳಕೆಯಿಂದ ಸಮೃದ್ಧ ಬೆಳೆಗಳನ್ನು ಬೆಳೆದು, ಬಂಗಾರದ ಬದುಕು ಸಾಗಿಸಬಹುದು ಎಂದು ವಿಧಾನ ಪರಿಷತ್ ಸದಸ್ಯ ಹಣಮಂತ ನಿರಾಣಿ ಹೇಳಿದರು. ಬೀಳಗಿ ಕ್ರಾಸ್ ನಿರಾಣಿ ಗೃಹ ಕಚೇರಿಯಲ್ಲಿ ನಡೆದ ಎಮ್.ಆರ್.ಎನ್. ನಿರಾಣಿ ಉದ್ಯಮ ಸಮೂಹ ಸಂಸ್ಥೆಯ ಸಹಯೋಗದಲ್ಲಿ ನಡೆದ ಕಬ್ಬಿನ ಬೆಳವಣಿಗೆಯಲ್ಲಿ ತಾಂತ್ರಿಕತೆಯ ಕುರಿತು ವಿಚಾರ ಸಂಕೀರ್ಣ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು. ಹೊಲದ ಭಾಗದಲ್ಲಿ ನಿಖರವಾದ ಉತ್ಪಾದಕತೆಯ ಒಳನೋಟಗಳು, ನೀರಾವರಿ ಸಮಸ್ಯೆಗಳು, ರೋಗಗಳು ಇತ್ಯಾದಿಗಳ ಮುನ್ನೆಚ್ಚರಿಕೆ ನೀಡುತ್ತದೆ ಒಟ್ಟಿನಲ್ಲಿ ರೈತನು ಯಾವುದೇ ಸಮಸ್ಸೆಯನ್ನು ಈ ಆಪ್‌ನಲ್ಲಿ ಹಂಚಿಕೊಂಡರೆ ತಕ್ಷಣ ಪರಿಹಾರ ತಿಳಿಸುತ್ತದೆ. ಕಡಿಮೆ ವೆಚ್ಚದಲ್ಲಿ ಅಧಿಕ ಲಾಭಗಳಿಕೆ ಮಾಡಬಹುದು ಎಂದರು.

ಬೆಂಗಳೂರಿನ ಡಾ. ರವಿಶಂಕರ್ ಮಾತನಾಡಿ, ಅವರು ಎಸಿಎಂಪಿ ರೈತನ ಬೆಳೆಯ ಇಳುವರಿಯನ್ನು ಹೆಚ್ಚಿಸಲು ಮತ್ತು ಅವರ ವೆಚ್ಚವನ್ನು ಕಡಿಮೆ ಮಾಡಲು ಅನುವು ಮಾಡಿಕೊಡುತ್ತದೆ. ಬೆಳೆಗಳ ನಿಯಮಿತ ಮೇಲ್ವಿಚಾರಣೆ ಸಮಸ್ಯಗಳ ಆರಂಭಿಕ ಸ್ಥಿತಿಯಲ್ಲೇ ಪತ್ತೆ ಮಾಡಿ ಅದನ್ನು ಸರಿಪಡಿಸುವ ಕ್ರಮಕ್ಕಾಗಿ ರಿಮೋಟ್ ಸೆನ್ಸಿಂಗ್ ಸ್ಯಾಟಲೈಟ್ ಇಮೇಜಿಂಗ್ ತಂತ್ರಜ್ಞಾನ ಬಳಸಬಹುದಾಗಿದೆ. ಅಗತ್ಯಕ್ಕೆ ಅನುಗುಣವಾಗಿ ಕಾಲ ಕಾಲಕ್ಕೆ ಕೃಷಿ ಚಟುವಟಿಕೆಗಳನ್ನು ರೈತರು ಅಳವಡಿಸಿಕೊಂಡರೆ ಉತ್ತಮ ಫಸಲು ಪಡೆಯಬಹುದು.

ಕಬ್ಬಿನ ಬೆಳವಣಿಗೆಯಲ್ಲಿ ತಾಂತ್ರಿಕ ಪ್ರಗತಿ ಹಾಗೂ ಹೊಸದಾಗಿ ಬಂದ ತಂತ್ರಜ್ಞಾನಗಳು ರೈತರಿಗೆ ತಲುಪುತ್ತಿಲ್ಲ ಮತ್ತು ಕೆಲ ರೈತರು ಆಸಕ್ತಿ ತೋರಿಸುತಿಲ್ಲ, ಸುಧಾರಿತ ಬೆಳೆ ಮತ್ತು ಬೆಳೆ ಆರೋಗ್ಯ, ಹೆಚ್ಚಿನ ಬೆಳೆ ಇಳುವರಿ, ಹೊಲದ ಯಾವ ಭಾಗದಲ್ಲಿ ನಿಖರವಾದ ಉತ್ಪಾದಕತೆಯ ಒಳ ನೋಟ, ನೀರಾವರಿ ಸಮಸ್ಯೆಗಳ ಕುರಿತು ಈ ಮೋಬೈಲ್ ಆಪ್‌ನಲ್ಲಿ ತಿಳಿಯಬಹುದು ಎಂದರು. ಭರತ ಮಾತನಾಡಿ, ರೈತರಿಗೆ ಮೊಬೈಲ್ ಆಪ್ ಮೂಲಕ ಮೂಲಕ ಹವಾಮಾನ ಮುನ್ಸೂಚನೆ, ಬೆಳೆಗೆ ಎಷ್ಟು ಪ್ರಮಾಣ ನೀರು ಕೊಡಬೇಕು ಎನ್ನುವುದನ್ನ ಸೂಚಿಸುತ್ತದೆ, ಕಬ್ಬು ಬೆಳೆಯುವ ರೈತರಿಗಾಗಿ ಕಬ್ಬಿನಲ್ಲಿ ಹೆಚ್ಚು ಲಾಭದಾಯಕ ಹಾಗೂ ಗರಿಷ್ಠ ಉತ್ಪಾದನೆ. ತಾಂತ್ರಿಕ ಪ್ರಗತಿಯಿಂದ ಆಗಿರುವ ಬಲಾವಣೆಯನ್ನು ಎಂ.ಆರ್.ಎನ್ ಸಂಸ್ಥೆಯ ಮೂಲಕ ರೈತರಿಗೆ ತಲುಪಿಸಲಾಗುತ್ತಿದೆ, ನಿರಾಣಿ ಸಂಸ್ಥೆಯ ಮೂಲಕ ಹೋದರೆ ಒಂದೇ ವೇದಿಕೆಯಲ್ಲಿ 1 ಲಕ್ಷಕ್ಕೂ ಅಧಿಕ ರೈತರಿಗೆ ಮಾಹಿತಿ ತಲುಪಿಸಬಹುದು ಎಂಬ ಉದ್ದೇಶದಿಂದ, ಮುಧೋಳ, ಜಮಖಂಡಿ, ಬಾದಾಮಿ ಮತ್ತು ಬೀಳಗಿಯಲ್ಲಿ ಕಬ್ಬು ಬೆಳವಣಿಗೆ ಬಗ್ಗೆ ಮಾಹಿತಿ ನೀಡಲಾಗುತ್ತಿದೆ ಎಂದರು.

ಮುಧೋಳ ಎಮ್.ಆರ್.ಎನ್. ಸಕ್ಕರೆ ಕಾರ್ಖಾನೆಯ ಜಿಎಮ್. ಗಂಗಾಧರ ಹುಕ್ಕೇರಿ, ಪ್ರಗತಿಪರ ರೈತ ರಾಮಣ್ಣ ಕಾಳಪ್ಪಗೋಳ, ಮಲ್ಲಪ್ಪ ಶಂಭೋಜಿ, ಶ್ರೀಶೈಲ ಯಂಕಂಚಿಮಠ, ಮಲ್ಲಯ್ಯ ಸುರಗಿಮಠ, ಹಣಮಂತ ಹಲಹಲಿ, ಶೇಖರ ಗೊಳಸಂಗಿ ಮತ್ತಿತರರು ಇದ್ದರು.

# ವಿಶ್ವಕ್ಕೆ ಸಿ.ವಿ. ರಾಮನ್ ಕೊಡುಗೆ ಅಪಾರ: ಸಂತೋಷ ಬಂಡೆ

**ವಿಜಯಪುರ** : ಸಿ.ವಿ. ರಾಮನ್ ಅವರು ಸಂಶೋಧಿಸಿದ ರಾಮನ್ ಎಫೆಕ್ಟ್ ವಿಶ್ವಕ್ಕೆ ಅದ್ಭುತ ಕೊಡುಗೆ. ಅದು ವಿಜ್ಞಾನ ಕ್ಷೇತ್ರದ ಜತೆಗೆ ಮನುಕುಲದ ಉದ್ಧಾರಕ್ಕೆ ಹೆಚ್ಚು ಸಹಕಾರಿಯಾಗಿದೆ ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು.

ಗುರುವಾರ ತಾಲೂಕಿನ ನಾಗಠಾಣ ಗ್ರಾಮದ ಅರಿವು ಕೇಂದ್ರದಲ್ಲಿ ಸರ್ ಸಿ.ವಿ. ರಾಮನ್ ಜಯಂತಿ ಆಚರಣೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಸರ್ ಸಿ.ವಿ.ರಾಮನ್ ವಿಜ್ಞಾನ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆಯನ್ನು ನೀಡುವ ಮೂಲಕ ದೇಶದ ಬೆಳವಣಿಗೆಗೆ



ಕಾರಣಕರ್ತರಾಗಿದ್ದಾರೆ. ವಿಜ್ಞಾನದ ಅರಿವು ಎಲ್ಲರಿಗೂ ಅತ್ಯಗತ್ಯ ಎಂದು ಹೇಳಿದರು. ಶಿಕ್ಷಕ ಎಸ್.ಆರ್. ಚಾಳೇಕರ ಮಾತನಾಡಿ, ವಿಮಾನ ನಿಲ್ದಾಣದ ಭದ್ರತಾ ತಪಾಸಣೆ ವಿಭಾಗದಲ್ಲಿ ಸರಕುಗಳ ಪರಿವೀಕ್ಷಣೆ ಮಾಡಲು, ಅಲರ್ಜಿಗೆ ಕಾರಣವಾದ ಹಾನಿಕಾರಕ ವಸ್ತುಗಳ ಬಗ್ಗೆ ತಿಳಿಯುವ ಜತೆಗೆ ಅನೇಕ ಕ್ಷೇತ್ರದಲ್ಲಿ ರಾಮನ್ ಎಫೆಕ್ಟ್ ಆವಿಷ್ಕಾರ ಇಂದು ಬಳಕೆಯಾಗುತ್ತಿದೆ ಎಂದು ಹೇಳಿದರು.

ಗ್ರಂಥಪಾಲಕ ಮಂಜುನಾಥ ಗಂಗನಳ್ಳಿ ಮಾತನಾಡಿ, ಸರ್ ಚಂದ್ರಶೇಖರ ವೆಂಕಟರಾಮನ್ ಒಬ್ಬ ಭಾರತೀಯ ಭೌತಶಾಸ್ತ್ರಜ್ಞರಾಗಿದ್ದು, ಅವರ ಪ್ರತಿ ಕೆಲಸವು ಭಾರತದ ವಿಜ್ಞಾನ ಲೋಕದಲ್ಲಿ ಅಚ್ಚಳಿಯದೇ ಉಳಿದಿದ್ದು, ವಿಜ್ಞಾನದ ಬಗ್ಗೆ ಎಲ್ಲರೂ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದು ಹೇಳಿದರು. ಗ್ರಾಮದ ಹನಮಂತ ವಾಲೀಕಾರ, ರಾಜು ಕತ್ನಳ್ಳಿ, ಪ್ರವೀಣ ಅರಕೇರಿ, ಪ್ರಕಾಶ ಹೊಸಟ್ಟಿ, ಸಚಿನ್ ಹಳ್ಳಿ, ಭರತೇಶ್ ಅರಕೇರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ನೈತಿಕತೆ ಬೋಧಿಸುವ ಶ್ರೇಷ್ಠ ಗ್ರಂಥ ಭಗವದ್ಗೀತೆ: ಸಾವಿರಕ್ಕೂ ಹೆಚ್ಚು ಭಗವದ್ಗೀತೆ ವಿತರಣೆ

**ವಿಜಯಪುರ** : ಶ್ರೀ ಸರ್ವಜ್ಞೇಂದ್ರ ಸರಸ್ವತಿ ಪ್ರತಿಷ್ಠಾನದ ಸಹಯೋಗದಲ್ಲಿ ನಡೆಯುತ್ತಿರುವ ಭಗವದ್ಗೀತಾ ಅಭಿಯಾನದ ಹಿನ್ನೆಲೆಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಸಾವಿರಕ್ಕೂ ಹೆಚ್ಚು ಭಗವದ್ಗೀತೆಯ ಪ್ರತಿಗಳನ್ನು ಉಚಿತವಾಗಿ ವಿತರಿಸಲಾಯಿತು.

ಅಭಿಯಾನದ ಕಾರ್ಯಾಧ್ಯಕ್ಷ ಉಮೇಶ ಕಾರಜೋಳ ಮಾತನಾಡಿ, ಭಗವದ್ಗೀತೆ ಮನುಷ್ಯನಿಗೆ ನೈತಿಕತೆ ಬೋಧಿಸುವ ದಿವ್ಯ ಗ್ರಂಥ, ಗೀತಾ ಸಾರವನ್ನು ತಿಳಿದುಕೊಂಡು ಬದುಕಿದರೆ ಇಡೀ ಬದುಕೇ ಧನ್ಯವಾಗುತ್ತದೆ, ಯುದ್ಧಭೂಮಿಯಲ್ಲಿ ಅರ್ಜುನ ಶಸ್ತ್ರಾಸ್ತ್ರ ಕೆಳಗಿಟ್ಟ ಸಂದರ್ಭದಲ್ಲಿ ಅಸತ್ಯದ ವಿರುದ್ಧ ಸತ್ಯದ ಜಯಕ್ಕಾಗಿ ಈ ಹೋರಾಟ ಅನಿವಾರ್ಯ ಎಂದು ವಿವರಿಸುವ ಸಂದರ್ಭದಲ್ಲಿ ಭಗವಾನ ಶ್ರೀ ಕೃಷ್ಣ ಭಗವದ್ಗೀತೆಯನ್ನು ಬೋಧಿಸುತ್ತಾರೆ, ಇಡೀ ಬದುಕಿನ ನಿಜಾರ್ಥವೇ ಭಗವದ್ಗೀತೆಯಲ್ಲಿ ಅಡಗಿದೆ, ಮಕ್ಕಳು ಬಾಲ್ಯದಲ್ಲಿಯೇ ಭಗವದ್ಗೀತೆಯ ತತ್ವಗಳನ್ನು ಅಳವಡಿಸಿಕೊಳ್ಳಲು ನೆರವಾಗಲು ಈ ಅಭಿಯಾನ ಸಂಘಟಿಸಲಾಗುತ್ತಿದೆ, ಮಕ್ಕಳು ಭಗವದ್ಗೀತೆಯನ್ನು ಓದುವ ಪರಿಪಾಠ ಅದರಲ್ಲಿರುವ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಸುಂದರ ಜೀವನ ಹಾಗೂ ಭವಿಷ್ಯ ರೂಪಿಸಿಕೊಳ್ಳಬೇಕಿದೆ ಎಂದರು. ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಪ್ರಧಾನ ಆಯುಕ್ತ ಸಿದ್ಧಣ್ಣ ಸಕ್ರಿ, ಸಹಜಾನಂದ ದಂಧರಗಿ, ಜಿಲ್ಲಾ ಯುವ ಪರಿಷತ್ ಜಿಲ್ಲಾಧ್ಯಕ್ಷ ಶರಣು ಸಬರದ, ರಾಜೇಶ್ವರಿ ಮೋಪಗಾರ, ಪರಶುರಾಮ ಕುಂಭಾರ, ಎಸ್ ಎಸ್ ಬೊಮ್ಮನಹಳ್ಳಿ, ವಿದ್ಯಾವತಿ ಅಂಕಲಗಿ, ರಾಜಶೇಖರ ಖೇಡಗಿ, ವಿನೋದ ಮಣೂರ, ವಿರೇಶ ಗೊಬ್ಬೂರ ಮೊದಲಾದವರು ಇದ್ದರು.

# ಸುರಗಿರಿ ಬೆಟ್ಟಕ್ಕೆ ತೆರಳಿದ ಭಕ್ತರು ಸಂಭ್ರಮದ ಪಲ್ಲಕ್ಕಿ ಉತ್ಸವ





**ಮಹಾಲಿಂಗಪುರ :** ಬೀಳಗಿ ತಾಲ್ಲೂಕಿನ ಶ್ರೀಕ್ಷೇತ್ರ ಸುರಗಿರಿ ಬೆಟ್ಟದ ಭುವನೇಶ್ವರಿ ದೇವಸ್ಥಾನದಲ್ಲಿ ನಡೆಯುವ ಅಂಬಾರಿ ಉತ್ಸವ ಅಂಗವಾಗಿ ಪಟ್ಟಣದಲ್ಲಿ ಸಂಭ್ರಮದ ಪಲ್ಲಕ್ಕಿ ಉತ್ಸವ ನಡೆಯಿತು. ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಅಪಾರ ಸಂಖ್ಯೆಯ

ಭಕ್ತರ ಮಧ್ಯೆ ಮಹಾಲಿಂಗೇಶ್ವರ ಸ್ವಾಮೀಜಿ ಪಲ್ಲಕ್ಕಿ ಉತ್ಸವಕ್ಕೆ ಚಾಲನೆ ನೀಡಿದರು. ಉತ್ಸವ ಅಂಗವಾಗಿ ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮ ನೆರವೇರಿತು.

ಸಕಲ ವಾದ್ಯ ಮೇಳದೊಂದಿಗೆ ಮಹಾಲಿಂಗೇಶ್ವರ ದೇವಸ್ಥಾನದಿಂದ ಬಸವೇಶ್ವರ ವೃತ್ತದವರೆಗೆ ಪಲ್ಲಕ್ಕಿ ಉತ್ಸವದ ಮೆರವಣಿಗೆ ನಡೆಯಿತು. ಮಹಿಳೆಯರು ಬಾಗಿನವನ್ನು ತಲೆ ಮೇಲೆ ಹೊತ್ತು ಸಾಗಿದರು. ಬಸವೇಶ್ವರ ವೃತ್ತದಲ್ಲಿ ಪೂಜೆ ಸಲ್ಲಿಸಿದ ನಂತರ ಭಕ್ತರು ವಾಹನಗಳ ಮೂಲಕ ಸುರಗಿರಿ ಬೆಟ್ಟಕ್ಕೆ ತೆರಳಿದರು.

ಚನಬಸು ಹುರಕಡ್ಲಿ, ಮಲ್ಲಪ್ಪ ಭಾವಿಕಟ್ಟಿ, ಈರಣ್ಣ ಹಲಗತ್ತಿ, ಲಕ್ಕಪ್ಪ ಚಮಕೇರಿ, ಚಂದ್ರಶೇಖರ ಗೊಂದಿ, ಪ್ರಕಾಶ ಬಾಡನವರ, ಬಸವರಾಜ ಗಿರಿಸಾಗರ, ಶ್ರೀಶೈಲಪ್ಪ ಉಳ್ಳೇಗಡ್ಡಿ, ಸವಿತಾ ಹುರಕಡ್ಲಿ, ಮಹಾದೇವಿ ಹುಕ್ಕೇರಿ, ಮಹಾನಂದಾ ಅಂಗಡಿ, ಸುಜಾತಾ ವಜ್ಜರಮಟ್ಟಿ ಸೇರಿದಂತೆ ಹಲವರು ಇದ್ದರು.

### ಅಲ್ಲಮಪ್ರಭುದೇವರ ನೂತನ ಮಂದಿರ ಲೋಕಾರ್ಪಣೆ ನಿಮಿತ್ತ ತೇರದಾಳದಲ್ಲಿ ರೈತರ ಹಾಗೂ ಸೈನಿಕರ ಸಮಾವೇಶ

# ರೈತರಿಗೆ ಕೆಡಕು ಮಾಡಿದವರಿಗೆ ಭವಿಷ್ಯ ಇಲ್ಲ: ಈಶ್ವರಪ್ಪ







**ತೇರದಾಳ :** ಈ ನಾಡಿನ ಅನ್ನದಾತ ರೈತನಿಗೆ ಕೆಡಕು ಮಾಡಿದವರಿಗೆ ಭವಿಷ್ಯವೇ ಇಲ್ಲ. ನಸಿಸಿ ಹೋಗುತ್ತಾರೆ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಟೀಕಿಸಿದರು.

ತೇರದಾಳ ಕ್ಷೇತ್ರಾಧಿಪತಿ ಅಲ್ಲಮಪ್ರಭುದೇವರ ನೂತನ ದೇವಸ್ಥಾನ ಲೋಕಾರ್ಪಣೆ ನಿಮಿತ್ತ ಶುಕ್ರವಾರ ಹಮ್ಮಿಕೊಂಡಿದ್ದ ರೈತ ಹಾಗೂ ಸೈನಿಕ ಸಮಾವೇಶ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ದೇಶದ 135 ಕೋಟಿ ಜನರಿಗೆ ಅನ್ನ ಹಾಕುವ ರೈತರು ಇಂದಿಗೂ ಸಂಕಷ್ಟ ನಷ್ಟದಲ್ಲಿದ್ದಾರೆ ಎಂದರೆ ನಿಜಕ್ಕೂ ನೋವಿನ ಸಂಗತಿ. ಆದ್ದರಿಂದ ರೈತರು ಪರ್ಯಾವಾಗಿ ಆಧುನಿಕ ಕೃಷಿ ಪದ್ಧತಿ ಬಳಸುವುದರ ಜತೆಗೆ ಮಕ್ಕಳಿಗೆ ಉನ್ನತ ಮತ್ತು ಗುಣಮಟ್ಟದ ಶಿಕ್ಷಣ ನೀಡುವುದು ಅಗತ್ಯವಿದೆ ಎಂದು ಹೇಳಿದ ಕೆ.ಎಸ್. ಈಶ್ವರಪ್ಪ, ಹೋರಾಟಗಾರರಿಗೆ ಸ್ಫೂರ್ತಿ ಆಗಿರುವ ಮಠಾಧೀಶರು ಇಂದು ವಕ್ಫದಿಂದಾಗಿ ಅವರೇ ಬೀದಿಗಿಳಿದು ಹೋರಾಟ ನಡೆಸುವಂತಾಗಿದೆ. ಇದನ್ನು ಯಾರು ಸಹಿಸುವುದಿಲ್ಲ. ತಾವು ಕೂಡ ಎಲ್ಲದಕ್ಕೂ ಸಿದ್ಧ ಎಂದು ಪರೋಕ್ಷವಾಗಿ ರಾಜ್ಯ ಸರಕಾರಕ್ಕೆ ಚಾಟಿ ಬೀಸಿದರು.

ಚೀನಾ ಹಾಗೂ ಪಾಕಿಸ್ತಾನದಂತಹ ದುಷ್ಟ ರಾಷ್ಟ್ರಗಳು ಭಾರತ ದೇಶದ ಮೇಲೆ ಯುದ್ಧ ಸಾರಲು ಹಿಂದೇಟು ಹಾಕುವಂತಾಗಿದೆ. ಕಾರಣ ನರೇಂದ್ರ ಮೋದಿ ಅವರು ಪ್ರಧಾನ ಮಂತ್ರಿ ಆದ ಬಳಿಕ ಭಾರತೀಯ ಸೇನೆ ಅಷ್ಟೊಂದು ಬಲಿಷ್ಠವಾಗಿದೆ ಎಂದು ಬಣ್ಣಿಸಿದರು. ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಮಾತನಾಡಿ, 2014ರ ಸರ್ವೇ ಮಾಹಿತಿ ಪ್ರಕಾರ ದೇಶದಲ್ಲಿ ಶೇಕಡಾ 48ರಷ್ಟು ಜನ ಕೃಷಿ ಚಟುವಟಿಕೆಗಳನ್ನು ನಡೆಸುತ್ತಿದ್ದರೆ ಶೇ.524ಷ್ಟು ಜನ ಇನ್ನೂಳಿದ ಉದ್ಯೋಗಳನ್ನು ಅವಲಂಬಿಸಿದ್ದಾರೆ. ಆದರೆ ವಿಪರ್ಯಾಸ ಎಂದರೆ ಕೃಷಿ ಚಟುವಟಿಕೆಯಲ್ಲಿ 48 ಪ್ರತಿಶತ ಹೊಂದಿದ್ದರು ವಾರ್ಷಿಕ ಜಿಡಿಪಿ ಶೇ.20ರಷ್ಟು ಮಾತ್ರ ಇದೆ. 52ಪ್ರತಿಶತ ಹೊಂದಿದವರ ಜಿಡಿಪಿ ಶೇ.80ರಷ್ಟು ಇದೆ. ಇದನ್ನು ನಾವು ರೈತರು ಅರಿತುಕೊಳ್ಳಬೇಕಿದೆ ಎಂದು ವಿಶ್ಲೇಷಿಸಿದರು. ಆದ್ದರಿಂದ ಈ ನಾಡಿನಲ್ಲಿ ಧರ್ಮ ಮತ್ತು ಕರ್ಮವನ್ನು ಪಾಲಿಸುತ್ತಿರುವ ರೈತ, ಕೃಷಿ ಪದ್ಧತಿಯನ್ನು ಬದಲಾಯಿಸಿಕೊಳ್ಳುವುದರ ಜತೆಗೆ ತಾವು ಜಾಗೃತರಾಗಿ ಸರಕಾರಗಳನ್ನು ಜಾಗೃತಗೊಳಿಸುವ ಕೆಲಸ ಮಾಡಬೇಕೆಂದು ಹೇಳಿದರು. ರೈತರ ಹಾಗೂ ಕೃಷಿ ಕ್ಷೇತ್ರದ ಧ್ವನಿ ಆಗಿರುವ ಕನ್ನೇರಿಮಠದ ಶ್ರೀಗಳಿಗೆ ಕೃಷಿ ಸಂಸ್ಕೃತ ಅಂಬಾಸಿಡರ್ ಘೋಷನೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆಯುದಾಗಿ ಸಭೆಯಲ್ಲಿ ತಿಳಿಸಿದರು. ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಕೊಲ್ಲಾಪುರ ಕನ್ನೇರಿಮಠದ ಜಗದ್ಗುರು ಅದೃಶ್ಯ ಕಾಡಸಿದ್ಧೇಶ್ವರ ಶ್ರೀ, ಸಾಹಿತ್ಯ, ಜನಪದ, ಆಧ್ಯಾತ್ಮ, ಕೃಷಿ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿರುವ ಭಾಗಲಕೋಟೆ ಜಿಲ್ಲೆ ಉತ್ತರ ಕರ್ನಾಟಕದ ಪರಂಪರೆಯಾಗಿದೆ ಎಂದು ಬಣ್ಣಿಸಿದ ಶ್ರೀಗಳು, ಕೃಷಿ ಕ್ಷೇತ್ರದಲ್ಲಿ ರೈತರು ತಮ್ಮನ್ನು ತಾವು ಬದಲಾಯಿಸಿಕೊಳ್ಳದಿದ್ದರೆ ಭೂಮಿಯ ಫಲವತ್ತತೆ ಹಾಳಾಗುವುದರ ಜತೆಗೆ ರೈತರ ದು:ಸ್ಥಿತಿ ಮತ್ತಷ್ಟು ಬಿಗಿಗೊಳ್ಳುತ್ತದೆ. ಆದ್ದರಿಂದ ಸಾವಯವ ಕೃಷಿಗೆ ಆದ್ಯತೆ ನೀಡಿ ಎಂದು ರೈತರಿಗೆ ಸಲಹೆ ನೀಡಿದರು. ರಾಜ್ಯೋತ್ಸವ ಪ್ರಶಸ್ತಿ ವಿಜೇತ ಸಿದ್ದಪ್ಪ ಬಿದರಿ ಹಾಸ್ಯಭರಿತವಾಗಿಯೇ ರೈತರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಹಾಗೂ ಜಾಗೃತರಾಗಬೇಕಾದ ವಿಷಯಗಳ ಕುರಿತು ಹೇಳಿದರು. ಕಪ್ಪತಗುಡ್ಡ ನಂದಿವೇರಿಮಠದ ಶಿವಕುಮಾರ ಶ್ರೀ, ಶಾಸಕ ಸಿದ್ದು ಸವದಿ, ಮಾಜಿ ಸೈನಿಕರ ಒಕ್ಕೂಟದ ಬೆಳಗಾವಿ ಜಿಲ್ಲಾಧ್ಯಕ್ಷ ಜಗದೀಶ ಪೂಜಾರಿ ಮಾತನಾಡಿದರು. ಹಳೇ ಹುಬ್ಬಳ್ಳಿ ನೀಲಕಂಠಮಠದ ಜಗದ್ಗುರು ಶಿವಶಂಕರ ಶಿವಾಚಾರ್ಯ, ಹಲ್ಯಾಳ ಗುರುದೇವ ಆಶ್ರಮದ ಹರ್ಷಾನಂದ ಶ್ರೀ, ಶಿರೋಳದ ಶಂಕರಾರೂಢ ಶ್ರೀ, ಡಾ. ಮಹಾಂತಪ್ರಭು ಶ್ರೀ, ಗಂಗಾಧರ ದೇವರು, ವಿರುಪಾಕ್ಷ ದೇವರು, ಜಿಪಂ ಮಾಜಿ ಉಪಾಧ್ಯಕ್ಷ ಮುತ್ತಪ್ಪ ಕೋಮಾರ, ಮಾಜಿ ಸೈನಿಕರ ಒಕ್ಕೂಟದ ಜಿಲ್ಲಾಧ್ಯಕ್ಷ ಚಂದ್ರಶೇಖರ ಬಡ್ನೂರ, ಪರಪ್ಪ ಹನಗಂಡಿ ಸೇರಿದಂತೆ ಕೃಷಿ, ತೋಟಗಾರಿಕೆ ಇಲಾಖೆ ಅಧಿಕಾರಿಗಳು, ಮಾಜಿ ಯೋಧರು ಇದ್ದರು. ಕೃಷಿ ಸಾಧಕರಿಗೆ ಇದೇ ಸಂದರ್ಭದಲ್ಲಿ ಸಮಿತಿ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಸ್ವಾಮಿ ವಿವೇಕಾನಂದ ಇಂಟರ್‌ನ್ಯಾಷನಲ್ ಸ್ಕೂಲ್ ವಿದ್ಯಾರ್ಥಿಗಳಿಂದ ನಡೆದ 12ನೇ ಶತಮಾನದ ಅನುಭವ ಮಂಟಪದ ಅಲ್ಲಮಪ್ರಭು, ಬಸವೇಶ್ವರ ಹಾಗೂ ಅಕ್ಕಮಹಾದೇವಿ ನಡುವೆ ನಡೆದಿದ್ದ ಸನ್ನಿವೇಶದ ರೂಪಕ ಪ್ರದರ್ಶನ ಸಭಿಕರನ್ನು ರೋಮಾಂಚನಗೊಳಿಸಿತು.

# ನಗರಸಭೆ : ವಿವಿಧ ಸೌಲಭ್ಯಕ್ಕಾಗಿ ಅರ್ಜಿ

**ಬಾಗಲಕೋಟೆ :** ಮುಖ್ಯಮಂತ್ರಿಗಳ ಅಮೃತ ನಗರೋತ್ತಾನ ಯೋಜನೆಚು ಹಚಿತ 4ರಡಿ ಮಂಜೂರಾಗಿರುವ ಕ್ರೀಯಾ ಯೋಜನೆಗೆ ಪರಿಶಿಷ್ಟ ಜಾತಿ, ಪಂಗಡಗಳ ಕಲ್ಯಾಣಕ್ಕಾಗಿ ಕಾಯ್ದಿರಿಸಿದ ಶೇ.24.10ರ ಇತರೆ ವರ್ಗದ ಬಡಜನ ಕಲ್ಯಾಣಕ್ಕಾಗಿ ಕಾಯ್ದಿರಿಸಿ ಶೇ.7.25 ಹಾಗೂ ಅಂಗವಿಕಲರ ಕಲ್ಯಾಣಕ್ಕಾಗಿ ಕಾಯ್ದಿರಿಸಿ ಶೇ.5ರ ಅನುದಾನದಡಿಯಲ್ಲಿ ವಿವಿಧ ಯೋಜನೆಗಳಡಿ ವಿವಿಧ ಕಾರ್ಯಕ್ರಮಗಳಿಗೆ ಬಾಗಲಕೋಟೆ ವ್ಯಾಪ್ತಿಯಲ್ಲಿ ವಾಸಿಸುವ ಅರ್ಹ ಫಲಾಪೇಕ್ಷಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ಕೊನೆ ದಿನ ನವೆಂಬರ 30 ಆಗಿದ್ದು, ಹೆಚ್ಚಿನ ಮಾಹಿತಿಗಾಗಿ ದೂಸಂ.08354-235501ಗೆ ಕರೆ ಮಾಡುವಂತೆ ನಗರಸಭೆ ಪೌರಾಯುಕ್ತ ವಾಸಣ್ಣ ಆರ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂಭ್ರಮದ ಶ್ರೀಮಂತೆವ್ವ ದೇವಿ ಜಾತ್ರೆ

**ಬನಹಟ್ಟಿ :** ನಗರದ ಕೆರೆ ರಸ್ತೆಯ ಶ್ರೀಮಂತೆವ್ವ ದೇವಿ ಜಾತ್ರೆ ಶುಕ್ರವಾರ ಸಂಭ್ರಮ ಸಡಗರದಿಂದ ನಡೆಯಿತು. ಜಾತ್ರೆಯ ಅಂಗವಾಗಿ ಬೆಳಿಗ್ಗೆ ಅಭಿಷೇಕದ ನಂತರ ವಿಶೇಷ ಪೂಜೆಯನ್ನು ಕೈಗೊಳ್ಳಲಾಯಿತು. ನಂತರ ನೂರಾರು ಜನ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ನಡೆಯಿತು. ಮಧ್ಯಾಹ್ನ ಪ್ರಸಾದ ವ್ಯವಸ್ಥೆಯನ್ನು ಮಾಡಲಾಗಿತ್ತು. ಶಾಸಕ ಸಿದ್ದು ಸವದಿ, ಸಮಾಜದ ಪ್ರಮುಖರಾದ ಮಹಾದೇವ ತಳವಾರ, ಮೋಹನ ಈಟಿ, ರಾಜು ವಗ್ಗ, ಮಲ್ಲಪ್ಪ ತಳವಾರ, ಸತೀಶ ತಳವಾರ, ಶಿವಲಿಂಗ ಗೊಂಬಿಗುಡ್ಡ, ಲಕ್ಷ್ಮಣ ತಳವಾರ, ಭೀಮಶಿ ವಾಲೀಕಾರ, ಮುತ್ತಪ್ಪ ತಳವಾರ, ರಮೇಶ ತಮದಡ್ಡಿ, ವಿಠ್ಠಲ ತಳವಾರ, ರಾಜು ತಟಗಾರ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



# ತೋಟಗಾರಿಕೆ ಬೆಳೆಗಳಿಗೆ ವಿಮೆ ಪಾವತಿ

**ಬೆಳಗಾವಿ :** 2024-25 ಸಾಲಿನ ಹಿಂಗಾರು ಹಂಗಾಮಿಗೆ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ(ವಿಮಾ) ಯೋಜನೆಯಡಿ ಬೆಳಗಾವಿ ತಾಲ್ಲೂಕಿನ ಹಿರೇಬಾಗೇವಾಡಿ ಮತ್ತು ಬೆಳಗಾವಿ ಹೋಬಳಿಗಳಿಗೆ ಟೊಮ್ಯಾಟೊಹಾಗೂಉಚಗಾಂವ ಹೋಬಳಿಗೆ ಆಲೂಗಡ್ಡೆ (ನೀರಾವರಿ), ಬೆಳೆಗಳಿಗೆ ವಿಮಾ ಅಧಿಸೂಚನೆಗೊಂಡಿರುತ್ತವೆ. ಆಲೂಗಡ್ಡೆ (ನೀರಾವರಿ) ಬೆಳೆಗೆ ರೂ. 2,252 ಪ್ರತಿ ಹೆಕ್ಟೇರ್‌ಗೆ, ಟೊಮ್ಯಾಟೊಬೆಳೆಗೆರೂ.2,146/- ಪ್ರತಿ ಹೆಕ್ಟೇರ್‌ಗೆ ರೈತರ ವಂತಿಕೆಯ ವಿಮಾ ಕಂತು ನಿಗದಿಯಾಗಿದೆ.

ಆಸಕ್ತ ರೈತರು ಡಿಸೆಂಬರ 16 ರೊಳಗಾಗಿ ವಿಮೆ ಕಂತು ಪಾವತಿಸಬೇಕು. ಮರು ವಿನ್ಯಾಸಗೊಳಿಸಿದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ ಬೆಳಗಾವಿ ತಾಲ್ಲೂಕಿನ ಎಲ್ಲಾ ಹೋಬಳಿಗೆ ಹಸಿಮೆಣಸಿನಕಾಯಿ (ನೀರಾವರಿ) ಬೆಳೆವಿಮೆಪಾವತಿಸಿಬಹುದಾಗಿದ್ದು, ಹಸಿಮೆಣಸಿನಕಾಯಿ (ನೀರಾವರಿ) ಬೆಳೆಗೆ ರೂ. 3,590 ರಂತೆ ಪ್ರತಿ ಹೆಕ್ಟೇರ್‌ಗೆ ರೈತರ ವಂತಿಕೆಯ ವಿಮಾ ಕಂತು ನಿಗದಿಯಾಗಿದ್ದು, ಆಸಕ್ತ ರೈತರು ನ. 15 ರೊಳಗಾಗಿ ವಿಮೆ ಕಂತು ಪಾವತಿಸಲು ಕೊನೆ ದಿನವಾಗಿರುತ್ತದೆ. ರೈತರು ಹತ್ತಿರದ ಬ್ಯಾಂಕ್ ಶಾಖೆಗಳನ್ನು, ಸಾಮಾನ್ಯ ಸೇವಾ ಕೇಂದ್ರಗಳನ್ನು ಹಾಗೂ ಗ್ರಾಮ ಒನ್ ಕೇಂದ್ರಗಳನ್ನು ಸಂಪರ್ಕಿಸುವುದು.

ತಾಲ್ಲೂಕಿನಹವಾಮಾನಆಧಾರಿತ ಬೆಳೆ ವಿಮೆ ಯೋಜನೆಗೆ ಟಾಟಾ ಎ.ಐ.ಜಿ ಇನ್ಸುರೆನ್ಸ್ ಕಂಪನಿ ಹಾಗೂ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ ಬಿಮಾ ಯೋಜನೆಗಡ ಯುನಿವರ್ಸಲ್ ಸೊಂಪೊ ಜನರಲ್ ಇನ್ಸುರೆನ್ಸ್ ಕಂ.ಲಿ. ಅಧಿಸೂಚಿತ ವಿಮಾ ಸಂಸ್ಥೆಗಳಾಗಿದ್ದು, ರೈತರು ಯೋಜನೆಯ ಸದುಪಯೋಗ ಪಡೆಯುವಂತೆ (ಜಿ.ಪಂ) ಬೆಳಗಾವಿಯ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 12 ರೂ.ಗೆ ಜುನಕಾ ರೊಟ್ಟಿ ಊಟ..! ಬಡವರ ಸೇವೆಗೊಬ್ಬ ಮಾದರಿ ಶಿಕ್ಷಕ





* ಮಲ್ಲಿಕಾರ್ಜುನ ತುಂಗಳ

**ರಬಕವಿ-ಬನಹಟ್ಟಿ :** 12 ರೂ.ಗೆ ಟಿ-ಕಾಫಿ ಸಿಗದ ಕಾಲದಲ್ಲಿ ಇಲ್ಲಿನ ಅಮ್ಮ ಫೌಂಡೇಶನ್ ವತಿಯಿಂದ ಬಡವರು ಹಾಗು ನಿರ್ಗತಿಕರಿಗೆ ಕೇವಲ 12 ರೂ.ಗೆ ಬನಹಟ್ಟಿಯ ಮಂಗಳವಾರ ಪೇಟೆಯ ಈಶ್ವರಲಿಂಗ ಮೈದಾನ ಹತ್ತಿರವಿರುವ ಊಟದ ಮನೆಯಲ್ಲಿ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 3 ಗಂಟೆವರೆಗೂ ಸ್ಪೇಶಲ್ ಜುನುಕಾ ಬಿಸಿ ಜೋಳದ ರೊಟ್ಟಿ ನೀಡುವ ಮೂಲಕ ಹಸಿವು ನೀಗಿಸುವ ಕಾಯಕದಲ್ಲಿ ತೊಡಗಿದ್ದಾರೆ. ಯಾವದೇ ಅಪೇಕ್ಷೆಯಿಲ್ಲದೆ, ಮತ್ತೊಬ್ಬರ ಸಹಾಯ-ಸಹಕಾರವಿಲ್ಲದೆ ಸರ್ಕಾರಿ ಶಾಲಾ ಶಿಕ್ಷಕನೋರ್ವ ಇಂತಹ ಕಾರ್ಯದಲ್ಲಿ ತೊಡಗಿರುವದು ನಿಜಕ್ಕೂ ಮಾದರಿಯಾಗಿದೆ. ಪ್ರಸಕ್ತ ಚಿಕ್ಕಪಡಸಲಗಿಯ ಶಿವಶರಣ ಹರಳಯ್ಯ ಸ್ಮಾರಕ ಪ್ರೌಢಶಾಲೆಯಲ್ಲಿ ವಿಜ್ಞಾನ ವಿಷಯದ ಶಿಕ್ಷಕರಾಗಿರುವ ಬಸವರಾಜ ಜಾಲೋಜಿ ಇಂತಹ ಸಾಮಾಜಿಕ ಮಾನವೀಯ ಕಳಕಳಿ ಕಾರ್ಯದಲ್ಲಿರುವದು ಸ್ಮರಣೀಯ.

ಪ್ರಸ್ತುತ 120 ರಿಂದ 150 ಜನರು ದಿನಂಪ್ರತಿ ಆಹಾರ ಸೇವಿಸಲು ಆಗಮಿಸುತ್ತಾರೆ. ಚಿಕ್ಕ ಕೋಣೆಯಲ್ಲಿಯೇ ಬಿಸಿ ಬಿಸಿಯಾದ ರೊಟ್ಟಿ ತಯಾರಿಸಿ ಹಂಚಿನ ಮೇಲಿಂದ ತಯಾರಾದ ಬಿಸಿ ರೊಟ್ಟಿ ಪ್ಲೇಟ್‌ನಲ್ಲಿಯೇ ನೀಡುತ್ತಾರೆ. 2 ರೊಟ್ಟಿ ಹಾಗು ಜುನುಕದೊಂದಿಗೆ ಉಳ್ಳಾಗಡ್ಡಿ, ಸೌತೆಕಾಯಿ ನೀಡುವ ಮೂಲಕ ಈ ಭಾಗದ ಬಡವರಿಗೆ ಅನುಕೂಲವಾಗಿದೆ.


**'ಕಳೆದೆರಡು ವರ್ಷಗಳಿಂದ ದಿನಂಪ್ರತಿ ಊಟ ಇಲ್ಲಿಯೇ ಮಾಡುತ್ತೇನೆ. ನಿತ್ಯ 80 ರಿಂದ 100 ರೂ. ಸಂಪಾದಿಸುತ್ತೇನೆ. ಕಡಿಮೆ ದರದಲ್ಲಿ ನಿತ್ಯ ಊಟ ದೊರಕುತ್ತಿರುವದು ನನ್ನ ಪುಣ್ಯ.'**
**-ಗುರಪಾದ ತಳವಾರ, ಕೂಲಿ ಕಾರ್ಮಿಕ.**

ಬಂದ ವೇತನದಲ್ಲಿಯೇ ಈ ಸೇವೆ: ಅಮ್ಮಾ ಫೌಂಡೇಶನ್ ವತಿಯಿಂದ ನಡೆಸಲಾಗುತ್ತಿರುವ ಈ ಊಟದ ಮನೆಗೆ ಮಾಸಿಕ ಶಿಕ್ಷಣ ಇಲಾಖೆಯಿಂದ ದೊರಕುವ ವೇತನದಲ್ಲಿಯೇ ಈ ರೊಟ್ಟಿ ಜುನುಕಾ ಊಟದ ಯೋಜನೆ ಒದಗಿಸುತ್ತಿದ್ದಾರೆ ಬಸವರಾಜ ಜಾಲೋಜಿ. ಯಾವದೇ ಫಲಾಪೇಕ್ಷೆಯಿಲ್ಲದೆ ಹಾಗು ಯಾರ ಸಹಾಯ ಧನವೂ ಇಲ್ಲದೆ ಈ ಕಾರ್ಯ ನಡೆಸುತ್ತಿರುವದು ನಿಜಕ್ಕೂ ಮಾನವೀಯತೆಗೆ ಹಿಡಿದ ಕನ್ನಡಿಯಾಗಿದೆ.

**'ವೇತನ ಅಷ್ಟಕಷ್ಟೇಯಿದ್ದರೂ ಬಡವರಿಗೆ ಊಟ ಒದಗಿಸುವದರಲ್ಲಿ ತೃಪ್ತಿ ತಂದಿದೆ. ನಿರಂತರ ಸೇವೆಯಲ್ಲಿ ನೆಮ್ಮದಿಯಿದೆ'.**
**-ವಾಸಂತಿ ಮಠಪತಿ, ಅಡುಗೆ ತಯಾರಕರು.**

ಬಡವರಿಗೆ ಆಧಾರ: ದಿನಂಪ್ರತಿ ಕೂಲಿ ಕಾರ್ಮಿಕರಿಗೆ, ಚಿಕ್ಕ ವೇತನ ದೊರಕುವ ಸಿಬ್ಬಂದಿಗಳಿಗೆ ಹಾಗು ನಿರಾಶ್ರಿತರಿಗೆ ಈ ಊಟದ ಮನೆ ಸಂಜೀವಿನಿಯಾಗಿದೆ. ಇಂದಿನ ದಿನಮಾನದಲ್ಲಿ ಕನಿಷ್ಠ 60 ರಿಂದ 80 ರೂ.ಗೆ ಊಟ ದೊರಕುವ ಸಂದರ್ಭದಲ್ಲಿ ಕೇವಲ 12 ರೂ.ಗೆ ದಿನಂಪ್ರತಿ 2 ರೊಟ್ಟಿ ಜೊತೆಗೆ ಸಾಕಾಗುವಷ್ಟು ಜುನುಕಾ ಒದಗಿಸುತ್ತಿರುವದು ವಿಶೇಷ.

'ಬಡವರಿಗೆ ಅನುಕೂಲವಾಗಲೆಂಬ ಉದ್ದೇಶದಿಂದ 12 ರೂ.ಗೆ ರೊಟ್ಟಿ ಊಟ ನೀಡಲಾಗುತ್ತಿದೆ. ಎಲ್ಲಿಯವರೆಗೂ ಆ ದೇವರು ಶಕ್ತಿ ನೀಡುತ್ತಾನೋ, ಅಲ್ಲಿಯವರೆಗೂ ಈ ಕಾರ್ಯ ಮುಂದುವರೆಸಿಕೊಂಡು ಹೋಗುತ್ತೇನೆ.' ಬಸವರಾಜ ಜಾಲೋಜಿ, ಶಿಕ್ಷಕ ಹಾಗು ಅಮ್ಮಾ ಫೌಂಡೇಶನ್ ಸಂಸ್ಥಾಪಕ, ಬನಹಟ್ಟಿ.



ರಬಕವಿ ಬನಹಟ್ಟಿ : ತಾಲ್ಲೂಕಿನ ನಾವಲಗಿ ಗ್ರಾಮದ ಪಿಕೆಪಿಎಸ್ ಅಧ್ಯಕ್ಷರಾಗಿ ಸಿದ್ದು ಲೆಂಡಿ ಮತ್ತು ಉಪಾಧ್ಯಕ್ಷರಾಗಿ ವಿಠ್ಠಲ ಜನವಾಡ ಅವಿರೋಧವಾಗಿ ಆಯ್ಕೆಯಾದರು. ಈ ಸಂದರ್ಭದಲ್ಲಿ ಸಂಘದ ಸದಸ್ಯರು ಉಪಸ್ಥಿತರಿದ್ದರು.

# ಮೋನಿಕಾಗೆ ಜೀವ ವಿಜ್ಞಾನ ಡಾಕ್ಟರೇಟ್ ಪದವಿ



**ಕೆ.ಆರ್.ಪೇಟೆ :** ಪಟ್ಟಣದ ಹಳೇ ಮೈಸೂರು ರಸ್ತೆಯ ಪ್ರಗತಿ ಶಾಲೆಯ ಹತ್ತಿರ ವಾಸವಾಗಿರುವ ಪೌಷ್ಟಿಕ ಹಾಗೂ ಆಹಾರ ತಜ್ಞೆ ಎಂ.ಕೆ. ಮೋನಿಕಾ ಅವರಿಗೆ ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಇಂದ ಜೀವ ವಿಜ್ಞಾನ ಪಿ ಎಚ್ ಡಿ ಪದವಿ ನೀಡಿರುತ್ತದೆ.

ಎಂ.ಕೆ. ಮೋನಿಕಾ ಅವರು ಜೀವ ವಿಜ್ಞಾನ ವಿಭಾಗದ ಜೈವಿಕ ರಸಾಯನಶಾಸ್ತ್ರದಲ್ಲಿ ಎಂ.ಎಸ್. ಸಿ ಪದವಿ ಹಾಗೂ ಕ್ಲಿನಿಕಲ್ ನ್ಯೂಟ್ರಿಷಿಯನ್ ಮತ್ತು ಡಯಟ್ ಯಿನ್ ನಲ್ಲಿ ಎಂ. ಎಸ್. ಸಿ ಪದವಿ ಪಡೆದಿದ್ದಾರೆ,

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಜೀವರಸಾಯನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಜೆ. ಎಂ. ಸಿದ್ದೇಶ್ ಅವರ ಮುಖ್ಯ ಮಾರ್ಗದರ್ಶನ ಹಾಗೂ ಸಹಾಯಕ ಪ್ರಾಧ್ಯಾಪಕರಾದ ಡಾ. ರಘುರಾಮ್ ಆಚಾರ್ ಮತ್ತು ಡಾ. ಹರೀಶ್ ಪ್ರಶಾಂತ್ ಕೆ .ವಿ. ಪ್ರಧಾನ ವಿಜ್ಞಾನಿ ಸಿ ಎಫ್ ಟಿ ಆರ್ ಐ ಇವರ ಸಹ ಮಾರ್ಗದರ್ಶನದಲ್ಲಿ ಜೀವವಿಜ್ಞಾನದ ಜೀವ ರಾಸಾಯನಿಕ ಶಾಸ್ತ್ರಕ್ಕೆ ಸಂಬಂಧಿಸಿದ 'ವ್ಯಾಲಿಡೇಷನ್ ಆಫ್ ಬಯೋ ಆಕ್ಟಿವ್ ಮಾಲಿಕುಲಸ್ ಫ್ರಮ್ ಆರ್ಟೋಕಾರ್ಪಸ್ ಅಲ್ಟಿಲಿಸ್ ಎಸಿಇ ಇನ್ನಿಬೀಟರ್ಸ್ ಫ್ರಮ್ ದಿ ಟ್ರೀಟ್ಮೆಂಟ್ ಆಫ್ ಹೈಪರ್ ತೆನ್ಶನ್ ಯೂಸಿಂಗ್ ಇನ್ ಸಿಲಿಕೋ ಇನ್ ವಿಟ್ರೋ ಅಂಡ್ ಇನ್ ವಿ ವೋ ಮಾಡೆಲ್ ಸಿಸ್ಟಮ್ಸ್ (validation of bioactive molecules from artocarpus altilis as ACE inhibitors the treatment of hypertension using_in. silico in vitro and in Vivo_model systems) ಎಂಬ ವಿಷಯದ ಮೇಲೆ ನಡೆಸಿದ ಮಹಾಪ್ರಬಂಧಕ್ಕೆ ಜೀವ ವಿಜ್ಞಾನ ವಿಷಯದ ಮೇಲೆ ಪಿ.ಎಚ್.ಡಿ ಪಡೆದಿರುತ್ತಾರೆ.

ಮೋನಿಕಾ ಅವರು ನಿವೃತ್ತ ಜಿಲ್ಲಾ ಲೋಕ ಶಿಕ್ಷಣ ಅಧಿಕಾರಿ ಹಾಗೂ ಪ್ರಾಂಶುಪಾಲ ಡಾ. ಕೆ. ಕಾಳೇಗೌಡ ಹಾಗೂಪ್ರಗತಿಎಜುಕೇಶನ್‌ಸಂಸ್ಥೆಯ ಶೈಲಜಾ ಅವರ ಪುತ್ರಿಯಾಗಿದ್ದಾರೆ.

ಮೋನಿಕಾ ರವರು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದ ಸಮ್ಮೇಳನ ಕಾರ್ಯಕ್ರಮದಲ್ಲಿ ಭಾಗವಹಿಸಿಹಲವಾರುಪ್ರಶಸ್ತಿಗಳನ್ನು ಪಡೆದಿರುತ್ತಾರೆ

ಬಯೋಕೆಮಿಸ್ಟ್ರಿಎಮರ್ಜಿಂಗ್‌ಸೈನ್ಸ್‌ಅಂಡ್‌ಟೆಕ್ನಾಲಜಿ ಆನ್ ದ ಟೀಮ್ ಆಫ್ ಕರೆಂಟ್ ಡೆವಲಪ್ಮೆಂಟ್ ರಿಸರ್ಚ್‌ಅಂಡ್‌ಟ್ರಾನ್ಸ್‌ಡಿಸ್ಸಿಪ್ಲೀನರಿಅಪ್ಲಿಕೇಶನ್ ಎಂಬ ನಡೆದ ಎರಡು ದಿನದ ರಾಷ್ಟ್ರೀಯ ಸಮ್ಮೇಳನದಲ್ಲಿ ಪೋಸ್ಟರ್ ಪ್ರಸ್ತುತಿಗೆ ಮೂರನೇ ಬಹುಮಾನವನ್ನು ಪಡೆದಿರುತ್ತಾರೆ. ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಕರ್ನಾಟಕರಾಜ್ಯಮುಕ್ತವಿಶ್ವವಿದ್ಯಾಲಯದಲ್ಲಿಕ್ಲಿನಿಕಲ್ ನ್ಯೂಟ್ರಿಷನ್ ಐದನೇ ಶ್ರೇಣಿ ಪಡೆದಿರುತ್ತಾರೆ ಇವರು ಹಲವಾರು ಕ್ರೀಡೆ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಆಸಕ್ತಿಯಿಂದ ಭಾಗವಹಿಸಿರುತ್ತಾರೆ. ಸಾಂಸ್ಕೃತಿಕ ಕಾರ್ಯಕ್ರಮಗಳಾದದಸರಾಚಂದನಟಿವಿಸೇರಿದಂತೆ ಹಲವಾರು ಕಡೆ ಭರತನಾಟ್ಯ ಕಾರ್ಯಕ್ರಮವನ್ನು ಸಹ ನೀಡಿರುತ್ತಾರೆ.

ಇವರು ಪಡೆದಿರುವ ಪಿ ಎಚ್ ಡಿ ಪದವಿಗೆ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘದ ಮೈಸೂರು ವಿಭಾಗದ ಸಂಚಾಲಕ ರಾಜು,ತಾಲೂಕು ಸಾಹಿತ್ಯ ಪರಿಷತ್ ಅಧ್ಯಕ್ಷ ಪೂರ್ಣ ಚಂದ್ರ ತೇಜಸ್ವಿ ಹಾಗೂ ಮಾಧ್ಯಮ ಸ್ಟುಡಿಯೋ ಕಛೇರಿಯ ಸ್ನೇಹಿತರು ಹಲವಾರು ಸಂಘ-ಸಂಸ್ಥೆ ಗಳು ಶುಭ ಹಾರೈಸಿದ್ದಾರೆ.

**ವರದಿ; ಎಸ್ ರವಿ ಹೊನ್ನೇನಹಳ್ಳಿ**



ಕೊಪ್ಪಳ ನಗರದ ಹೂವಿನ ಹಾಳ್ ರಸ್ತೆ ಯಲ್ಲಿರುವ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಯಲ್ಲಿ ಸೋಮವಾರ ದಂದು ದೇಶದ ಪ್ರಪ್ರಥಮ ಶಿಕ್ಷಣ ಮಂತ್ರಿ ಅಬುಲ್ ಕಲಾಂ ಅಜಾದ್ ರವರ ಜನ್ಮದಿನದ ಪ್ರಯುಕ್ತ ರಾಷ್ಟ್ರೀಯ ಶಿಕ್ಷಣ ದಿನಾಚರಣೆಯನ್ನು ಅಜಾದ್ ರವರ ಭಾವ ಚಿತ್ರಕ್ಕೆ ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State